MADAM SPEAKER —The Question is :

"That the Karnataka Secondary Educational Examination Board (Amendment) Bill, 1976 as passed by the Legislative Council be passed"

The Motion was adopted and the Bill was passed.

***The Registration Karnataka (Amendment) Bill, 1976. as passed by the L. C. Motion to Consider.**

SRI N. HUTCHAMASTHY GOWDA (Minister for Revenue).—Madam Speaker. I beg to move ;

That the Registration (Karnataka Amendment) Bill, 1976 as passed by the Legislative Council, be taken into consideration."

MADAM SPEAKER.—Motion moved :

"That the Registration (Karnataka Amendment) Bill, 1976 as passed by the Legislative Council, be taken into consideration."

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯಲ್ಲಿ ಮೂರು ಮುಖ್ಯ ಉದ್ದೇಶಗಳಿವೆ, ಅದರಲ್ಲಿ ಒಂದನೆಯದು ಈಗ ಸಬ್-ರಿಜಿಸ್ಟ್ರಾರ್ ಅವರ ಆಫೀಸಿಗೆ ಪತ್ರ ತೆಗೆದು ಕೊಂಡು ಹೋಗಿ ರಿಜಿಸ್ಟ್ರೇಷನ್‌ಗೆ ಕೊಡುವಾಗ, ಅವುಗಳನ್ನು ಕಾಪಿ ಮಾಡಿಕೊಡತಕ್ಕ ಕಾಲ ಬಹಳ ಹಿಡಿಯುವುದರಿಂದ, ಆ ಕಾಲವನ್ನು ಉಳಿಸಬೇಕೆಂಬ ದೃಷ್ಟಿಯಿಂದ, ಬಹಳ ಬೇಗ ಆ ಪತ್ರಗಳನ್ನು ನಕಲು ಮಾಡಿಕೊಡುವ ಕಾಲವನ್ನು ಉಳಿಸಬೇಕೆಂಬ ದೃಷ್ಟಿಯಿಂದ ಈ ಒಂದು ತಿದ್ದುಪಡಿ ತರಲಾಗಿದೆ, ಅಲ್ಲದೆ ಈ ಪತ್ರಗಳನ್ನು ಕೊಟ್ಟು ಸಬ್-ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ನಕಲು ಮಾಡುವುದಕ್ಕೆ ಬದಲು ಯಾರು ರಿಜಿಸ್ಟ್ರಾರ್ ಮಾಡುವುದಕ್ಕೆ ತೆಗೆದುಕೊಂಡು ಹೋಗುತ್ತಾರೆ ಅವರೇ ಆ ನಕಲು ತೆಗೆದುಕೊಂಡು ಹೋಗಿ ಸಬ್-ರಿಜಿಸ್ಟ್ರಾರ್ ಆಫೀಸಿಗೆ ಕೊಡತಕ್ಕುದ್ದು. ಎರಡನೆಯದಾಗಿ ಈ ಪತ್ರ ಬರೆಯತಕ್ಕವರು ಲೈಸೆನ್ಸ್ ತೆಗೆದುಕೊಳ್ಳಬೇಕು. ಮೂರನೆಯದು ಯಾವುವನ್ನು ಸರ್ಕಾರದವರು ಇಂಥಹ ಪತ್ರಗಳನ್ನು ರಿಜಿಸ್ಟ್ರರ್ ಮಾಡಬಾರದು ಎಂದು ನೋಟಿಫೈ ಮಾಡುತ್ತಾರೆ, ಯಾವುದು ಕಾನೂನು ಬಾಹಿರ ಎಂದು ಸರ್ಕಾರ ನೋಟಿಫೈ ಮಾಡುತ್ತಾರೆ ಅದಕ್ಕೆ ಸಂಬಂಧಪಟ್ಟ ಪತ್ರಗಳನ್ನು ರಿಜಿಸ್ಟರ್ ಮಾಡುವುದನ್ನು ಮಾಡದೇ ಇರಬಹುದು ಎಂದು ಅವರಿಗೆ ಅಧಿಕಾರ ಕೊಡತಕ್ಕುದ್ದು ಈ ಮೂರು ಮುಖ್ಯವಾದ ವಿಷಯಗಳು. ಉಳಿದವು ಇದಕ್ಕೆ ಸಂಬಂಧ ಪಟ್ಟ ತಿದ್ದುಪಡಿಗಳು, ಆದ್ದರಿಂದ ಈ ತಿದ್ದುಪಡಿಯ ಮೊದಲನೆಯ ಉದ್ದೇಶ ಕಾಲವನ್ನು ಉಳಿಸುವುದು, ಎರಡನೆಯದು ಈಗ ಇರತಕ್ಕ ಸಿಬ್ಬಂದಿಯನ್ನು ಕಡಿಮೆ ಮಾಡಿ ಸ್ವಲ್ಪ ಹಣವನ್ನು ಉಳಿತಾಯ ಮಾಡಬಹುದು ಎನ್ನುವ ಉದ್ದೇಶದಿಂದ ಈ ತಿದ್ದುಪಡಿ ಮಸೂದೆಯನ್ನು ತಂದಿದೆ ಇದಕ್ಕೆ ಮಾನ್ಯಸಭೆ ಒಪ್ಪಿಗೆ ಕೊಡಬೇಕೆಂದು ಹೇಳಿ ಸಭೆಯನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಟಿ.ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದೆ ಇರತಕ್ಕ ರಿಜಿಸ್ಟ್ರೇಷನ್ ಕರ್ನಾಟಕ ಅಮೆಂಡ್‌ಮೆಂಟ್ ಬಿಲ್ 1976ರ ಮಸೂದೆ ಬಹಳ ಉಪಯುಕ್ತವಾಗುವುದು ಮತ್ತು ಹೆಚ್ಚಿನ ಒಂದು ಹಣದ ಉಳಿತಾಯವಾಗುತ್ತದೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮೊದಲನೆಯದಾಗಿ ಯಾರು ಪತ್ರ ಬರೆದರೆ ಆ ಪತ್ರದಲ್ಲಿ ಆತನ ಟಿಕೇಜೆಡ್ ಕಾಪಿ ಕೊಡಬೇಕೆಂದು ಹೇಳಿದ್ದಾರೆ. ಈಗ ಆತನ ಟಿಕೇಜೆಡ್ ಪತ್ರವನ್ನು ಕೊಟ್ಟರೆ ರಿಜಿಸ್ಟ್ರೇಷನ್ ಆದ ಕೂಡಲೇ ಆ ಕಾಪಿಯನ್ನು ಕೊಡುತ್ತಾರೆಯೇ ಅಥವಾ ಒಂದು ರೀತಿಯನ್ನು ಕೊಟ್ಟು ಒಂದು ವಾರ

*Bill appended as annexure on 12th February 1976.

ಕಾಲಾವಕಾಶ ತೆಗೆದುಕೊಂಡು ಪತ್ರ ಕೊಡುತ್ತಾರೆಯೇ ಅದರ ಬಗ್ಗೆ ವಿವರಣೆ ಕೊಡಬೇಕು. ಇನ್ನು ಎರಡನೆಯದಾಗಿ ಹೇಳುವುದಾದರೆ ಈಗ ಮಾನ್ಯ ನಚಿವರಿಗೆ ಗೊತ್ತಿರುವ ಹಾಗೆ ಸಬ್-ರಿಜಿಸ್ಟ್ರಾರ್ ಮನಸ್ಸು ಮಾಡಿದರೆ ಅವೊತ್ತಿನ ದಿವಸ ಸಾಯಂಕಾಲಕ್ಕೆ ಪತ್ರ ಸಿಕ್ಕುತ್ತದೆ. ಅದಕ್ಕೆ ಸಾಕಾದಷ್ಟು ಶುಲ್ಕವನ್ನು ಬೇರೆ ರೀತಿಯಲ್ಲಿ ಕೊಟ್ಟರೆ ಆ ಕೆಲಸ ಬೇಗ ಆಗುತ್ತದೆ, ಅದು ಈಗಲೂ ಕೂಡ ಬೇಕಾದಷ್ಟು ಚಾಲ್ತಿಯಲ್ಲಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ,—ಕ್ರಮಬದ್ಧವಾಗಿ ಕೊಡಬೇಕಾದಂತಹ ಶುಲ್ಕ ಇದ್ದೇ ಇರುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಕ್ರಮಬದ್ಧವಾದ ಶುಲ್ಕ ಅಲ್ಲದೇ ಮೇಜಿನ ಕೆಳಗಡೆ ಕೊಡತಕ್ಕ ಶುಲ್ಕ ಬೇರೆ ಇದೆ. ಇದು ಅನೂಚಾನವಾಗಿ ಬಂದಿರುವುದು. ಇದು ಹಿಂದಿನ ಸರ್ಕಾರ ಇದ್ದ ಕಾಲಿದಲ್ಲೂ ಇತ್ತು ಎಂದು ಗೊತ್ತಿದೆ. ಮಾನ್ಯ ಮಂತ್ರಿಗಳು, ಕೆಲವು ಸಾರಿ ಸಬ್ ರಿಜಿಸ್ಟ್ರಾರ್ ಕಛೇರಿಗಳಿಗೆ ದಿಡೀರ್ ಭೇಟಿಕೊಟ್ಟು, ಪರಿಶೀಲನೆ ಮಾಡಿ, ಕೆಲವು ಅಧಿಕಾರಗಳನ್ನು ಹಿಡಿದಿರತಕ್ಕ ಪ್ರಸಂಗಗಳು ಇವೆ. ಆದರೆ, ಹಿಡಿದ ನಂತರ ಪರಿಣಾಮವೇನಾಯಿತು ಎನ್ನುವುದು ನಮಗೆ ಗೊತ್ತಿಲ್ಲ. ಒಂದು ಪತ್ರವನ್ನು ರಿಜಿಸ್ಟರ್ ಮಾಡಬೇಕಾದರೆ, ಒಂದು ನಕಲನ್ನು ಅವರಿಗೆ ಕೊಟ್ಟರೂ ಕೂಡ, ಆ ನಕಲನ್ನು ಒಂದು ಪುಸ್ತಕದಲ್ಲಿ ಬರೆದುಕೊಳ್ಳುವುದಕ್ಕೆ ಸಾಕಷ್ಟು ಕಾಲ ಬೇಕಾಗುತ್ತದೆ. ಇದರಲ್ಲಿ ಇರುವ ಅನುಕೂಲವೇನೆಂದರೆ, ಎಲ್ಲ ಪತ್ರಗಳನ್ನು ಸೇರಿಸಿಕೊಂಡು, ಕೆಲಸವಿಲ್ಲದ ಕಾಲದಲ್ಲಿ ಅವುಗಳನ್ನು ಮಾಡುವುದಕ್ಕಾಗುತ್ತದೆ; ಇದರಿಂದ ಬೇಗ ಕೆಲಸವಾಗುತ್ತದೆ ಎನ್ನುವುದೊಂದೇ. ಆದರೆ, ಇದರಿಂದಾಗುವ ಹಣದ ಪ್ರಭಾವದ ಪರಿಣಾಮವನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತದೆ.

ಇನ್ನು ಎರಡನೆಯದಾಗಿ, ಪತ್ರವನ್ನು ಬರೆಯತಕ್ಕವರಿಗೆ ಸಾಕಷ್ಟು ಅರ್ಹತೆ ಇರಬೇಕು; ಅಂಥಹವರು ಲೈಸೆನ್ಸ್ ತೆಗೆದುಕೊಳ್ಳಬೇಕು; ಅವರನ್ನು ಹೊರತು ಯಾರಾದರೊಬ್ಬರು ಲಾಯರ್ ಇರಬೇಕು ಎಂದು ನಿಯಮ ಇದೆ. ಆದರೆ ಇಲ್ಲಿ ಹೊಸ ವೈದ್ಯನಿಗಿಂತ ಹಳೇ ರೋಗಿಯೇ ಉತ್ತಮ ಎನ್ನುವಂತಾಗುತ್ತದೆ. ಕೆಲವು ಜನರು ಪತ್ರಗಳನ್ನು ಬರೆದು ಅದರಿಂದಲೇ ತಮ್ಮ ಜೀವನವನ್ನು ಸಾಗಿಸುವವರಿದ್ದಾರೆ. ಅವರು ಸಾಮಾನ್ಯವಾಗಿ ಲಾಯರುಗಳಿಗಿಂತ ಹೆಚ್ಚು ತಿಳಿದುಕೊಂಡಿರುತ್ತಾರೆ; ಮತ್ತು ಕೆಲವರು ತಜ್ಞರೂ ಇದ್ದಾರೆ. ಆದುದರಿಂದ, ಸರ್ಕಾರದವರು ಲೈಸೆನ್ಸ್ ಕೊಡುವಾಗ, ಯಾವ ಆಧಾರವನ್ನಿಟ್ಟುಕೊಂಡು ಕೊಡುತ್ತಾರೆ ಎಂಬ ಬಗ್ಗೆ ಸ್ವಲ್ಪ ವಿವರಣೆ ಕೊಟ್ಟರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಲೈಸೆನ್ಸ್ ಕೊಡುವುದಕ್ಕೆ. ಅವರಿಗೆ ಸಾಕಷ್ಟು ಅರ್ಹತೆ ಇರಬೇಕು ಎಂದು ಕಾನೂನಿನಲ್ಲಿ ಇದೆ. ಈಗ ಪತ್ರ ಬರೆಯುತ್ತಿರುವ ಕೆಲವರು ಇದನ್ನೇ ತಮ್ಮ ಜೀವನಕ್ಕೆ ಮಾರ್ಗವನ್ನಿಟ್ಟುಕೊಂಡಿರುವವರಿದ್ದಾರೆ; ಅವರು ಅಲ್ಲಿಗೆ ಬರುವ ಜನರಿಗೆ ಸಾಕಷ್ಟು ಸಹಾಯ ಮಾಡುತ್ತಾರೆ, ಮತ್ತು ಜನರ ಕೆಲಸ ಸುಲಭದಲ್ಲಿ ಆಗುವುದಕ್ಕೆ ಗೈಡಲೈನ್ ಕೂಡ ಕೊಡುತ್ತಾರೆ. ಅದುದರಿಂದ ಯಾವ ರೀತಿ ಲೈಸೆನ್ಸ್ ಕೊಡುತ್ತಾರೆ ಎನ್ನುವುದರ ಬಗ್ಗೆ ನಾನು ಸರ್ಕಾರದಿಂದ ವಿವರಣೆ ಕೇಳಿ ಬಯಸುತ್ತೇನೆ. ಹೊಸದಾಗಿ ಪತ್ರ ಬರೆಯುವವರನ್ನು ನೇಮಿಸುವಾಗ ಟೆಸ್ಟ್ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಬಹಳ ಕಾಲದಿಂದಲೂ ಬೇಕಾದಷ್ಟು ಪತ್ರಗಳನ್ನು ಬರೆದ ಅನುಭವವಿರುವ ಇವರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಸರ್ಕಾರದವರೇನಾದರೂ ಇಲ್ಲಿಗೆ ಹೊಸಬರನ್ನು ತಂದರೆ, ಪತ್ರಗಳನ್ನು ಸರಿಯಾಗಿ ಬರೆಯದೆ, ಕೋರ್ಟುಗಳಲ್ಲಿ ತಕರಾರುಗಳಾಗಿ, ಜನರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ, ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಿ, ಸಂಬಂಧಪಟ್ಟ ನಿಯಮಾವಳಿಗಳನ್ನು ಕೂಲಂಕಷವಾಗಿ ವಿಚಾರ ಮಾಡಿ, ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇದರ ಜೊತೆಗೆ, ಆಸ್ತಿಗಳ ಬೆಲೆ ಎಷ್ಟು ಎಂದು ತಿಳಿಯುವವರಿಗೆ ಆ ಪತ್ರಗಳನ್ನು ರಿಜಿಸ್ಟರ್ ಮಾಡಕೂಡದು ಮತ್ತು ಅದರ ಬಗ್ಗೆ ಒಂದು ಹಿಡಿತವನ್ನು ಇಟ್ಟುಕೊಳ್ಳಬೇಕೆಂದು ಇದನ್ನು ತಂದಿದ್ದಾರೆ. ಆದರೆ ಇದು ಬಹಳ ತಡವಾಗಿ ಬಂದಿದೆ ಎಂದು ನನ್ನ ಭಾವನೆ. ಏಕೆಂದರೆ, ಬೆಂಗಳೂರು ನಗರದಲ್ಲಿ ನೂಮಾರು ಒಂದು ಲಕ್ಷ ರೂಪಾಯಿ ಸೈಟುಗಳನ್ನು ಮಾರಿ, ಅನೇಕರು ಬೇಕಾದಷ್ಟು ಲಾಭ ಪಡೆಯುತ್ತಿದ್ದರು. ಆದುದರಿಂದ ಸರ್ಕಾರ, ರೂಪಾಯಿ ಸೈಟುಗಳ ಬಗ್ಗೆ ಟ್ರಸ್ಟ್‌ಬೋರ್ಡಿನಿಂದ ಒಪ್ಪಿಗೆ ಬರುವವರೆಗೆ ರಿಜಿಸ್ಟರ್ ಮಾಡುವುದಿಲ್ಲ ಎಂದು ಮೊದಲೇ ಕಾನೂನು ತಂದಿದ್ದರೆ, ಹೆಚ್ಚು ಪ್ರಯೋಜನವಾಗುತ್ತಿತ್ತು.

ಇನ್ನು ಮುಂದೆ ಸರ್ಕಾರದವರು, ಯಾವಾಗ ರಿಜಿಸ್ಟರ್ ಮಾಡಿಸಬೇಕು. ಯಾವಾಗ ಮಾಡಿಸ ಬಾರದು ಎಂಬ ಬಗ್ಗೆ ಕಾನೂನುಗಳನ್ನು ತರುವಾಗ, ಜನಸಾಮಾನ್ಯರಿಗೆ ಕಷ್ಟವಾಗದ ರೀತಿಯಲ್ಲಿ ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಮತ್ತು ನಿಯಮಾವಳಿಗಳನ್ನು ಮಾಡುವಾಗ ಸಾಕಷ್ಟು ಎಚ್ಚರಿಕೆಯಿಂದ ಮಾಡಿದರೆ, ಜನರ ಹಿತದೃಷ್ಟಿಯಿಂದ ಆಗತಕ್ಕ ಕೆಲಸಗಳು ಆದಷ್ಟು ತ್ವರಿತವಾಗಿಯೂ ಕಡಿಮೆ ಖರ್ಚಿನಲ್ಲಿದಂತೆಯೂ ಆಗುತ್ತದೆ ಎನ್ನುವುದು ನನ್ನ ಅಭಿಪ್ರಾಯ ಆದುದರಿಂದ ಸರ್ಕಾರದವರು ಈ ಬಗ್ಗೆ ಪದ್ಯ ಗಮನ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ಇನ್ನೊಂದು ವಿಚಾರವನ್ನು ತರುದರೆ. ತಪ್ಪಾಗಲಾರದೆಂದು ಬಾವಿಸುತ್ತೇನೆ. ಈಗ ರಾಜ್ಯದಲ್ಲಿ ಸ್ಟ್ಯಾಂಪ್ ಪೇಪರ್ ಒಂದೂ ಸಿಕ್ಕುತಾರೆ ಇಲ್ಲ. ಸಾಮಾನ್ಯವಾಗಿ ನಾಲ್ಕೂವರೆ ರೂಪಾಯಿಗಳ ಬಾಂಡ್ ಪೇಪರ್ ಮೇಲೆ ಪತ್ರಗಳನ್ನು ಬರೆಯ ಬೇಕಾಗುತ್ತದೆ. ಆದರೆ ಅನೇಕ ಸಂದರ್ಭಗಳಲ್ಲಿ ಪತ್ರಗಳೇ ಸಿಕ್ಕುವುದಿಲ್ಲ; ಹೀಗೆ ಸಿಕ್ಕದಂಥ, ಸಂದರ್ಭಗಳಲ್ಲಿ; ಅಂದರೆ 7 ರೂಪಾಯಿ ಸ್ಟಾಂಪ್ ಪೇಪರ್ ಬೇಕಿದ್ದು, ಅದು ಸಿಕ್ಕದಿದ್ದರೆ ಮೂರು, ಮತ್ತು ನಾಲ್ಕು ರೂಪಾಯಿಗಳ ಬೇರೆ ಬೇರೆ ಎರಡು ಸ್ಟಾಂಪ್ ಪೇಪರ್ ಮೇಲೆ ಪತ್ರ ಬರೆದು ಕೊಂಡು ಹೋದರೆ, ಅದನ್ನು ಅಲ್ಲಿನ ಇನ್‌ಸ್ಪೆಕ್ಟರ್ ಅವರು ಒಪ್ಪುವುದಿಲ್ಲ. ಆದರೆ, ಹೀಗೆ, ಎರಡು ಮೂರು ಪತ್ರವನ್ನು ಪೇರಿಸಿ ಬರೆದರೆ ತಪ್ಪಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಈಗ ಒಂದು ಪತ್ರ ರಿಜಿಸ್ಟರ್ ಆಗಬೇಕಾದರೆ, ಸಂಬಂಧಪಟ್ಟವರು ರಿಜಿಸ್ಟ್ರೇಷನ್‌ಗಾಗಿ ಬೇಕಾದಷ್ಟು ಖರ್ಚು ಮಾಡುತಾರೆ. ಆದರೆ, ಅವರಿಗೆ ಪತ್ರದ ಅಭಾವ ಇಪತ್ತಿನ ವಿಷಯ ಉದ್ಭವಿಸಿದೆ. ಹಳೇ ಕಾಲದಲ್ಲಿ ಈ ಸ್ಟ್ಯಾಂಪ್ ಪೇಪರ್‌ಗಳು ಒಳ್ಳೆಯ ಬಾಂಡ್ ಪೇಪರ್‌ನಿಂದ ಮಾಡಿದ್ದವಾಗಿದ್ದವು. ಆದರೆ, ಈಗ ಆ ರೀತಿಯ ಒಂದು ಕ್ವಾಲಿಟಿ ಇಲ್ಲ ಬಹಳ ವರ್ಷಗಳ ಕಾಲ ಸುರಕ್ಷಿತವಾಗಿ ಇಡಬೇಕಾದಂಥ ಪತ್ರಗಳನ್ನೂ, ದಾಖಲೆಗಳನ್ನೂ ಇದರಲ್ಲಿ ಬರೆದಿಡುವುದರಿಂದ, ಮಾಸಿ ಹೋಗಿರ ಬಹುದು; ಅಥವಾ ಆಳಿಸಿ ಹೋಗಬಹುದು. ಆದುದರಿಂದ, ಹಿಂದಿನಂತೆ, ಈಗಲೂ ಕೂಡ ಬಾಂಡ್ ಪೇಪರ್‌ಗಳನ್ನೇ ಇವುಗಳ ಬಗ್ಗೆ ನಮ್ಮನ್ನೆ ಮಾಡಿ, ಮತ್ತು ಈಗಿರತಕ್ಕ ಸ್ಟ್ಯಾಂಪ್ ಪೇಪರ್ ಕ್ವಾಪತ್ತನ್ನು ನಿವಾರಣೆ ಮಾಡಿ, ಸರಳವಾಗಿ ರಿಜಿಸ್ಟ್ರೇಷನ್ ಆಗುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ತಿಳಿಸಿ, ಈ ತಿದ್ದುಪಡಿ ಮಸೂದೆಗೆ ನನ್ನ ವಿರೋಧವಿಲ್ಲವೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪೆಚ್. ಜಿ. ಕೃಷ್ಣಪ್ಪ (ನಾಗಮಂಗಲ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರತಕ್ಕ ಈ ಮಸೂದೆ ಸದುದ್ದೇಶದಿಂದ ಕೂಡಿರುವುದಾದರೂ, ಅಪಾಯಕಾರಿ ಎನ್ನತಕ್ಕ ಮಾತನ್ನು ಈ ಸಮಯದಲ್ಲಿ ನಾನು ನಿರ್ಲಾಹವಿಲ್ಲದೆ ಹೇಳಬೇಕಾಗಿದೆ ಪತ್ರಗಳನ್ನು ಯಾರು ನೋಂದಾಯಿಸಬೇಕಾಗಿದೆಯೋ ಅಂಥವರು, ಎರಡು ಪತ್ರಗಳನ್ನು ಕಛೇರಿಗೆ ತೆಗೆದು ಕೊಂಡು ಹೋಗಿ, ಒಂದನ್ನು ಕಛೇರಿಯಲ್ಲೇ ಬಿಟ್ಟು, ಇನ್ನೊಂದನ್ನು ಮುದ್ರೆ ಒತ್ತಿದ ಮೇಲೆ ವಾಪಸ್ಸು ಪಡೆಯ ತಕ್ಕದ್ದು ಎಂದು ಇದೆ. ಇದರಿಂದ ಕಾಲವನ್ನು ಮಾತ್ರ ಉಳಿಸಬಹುದು ಆದರೆ, ಆ ಪತ್ರಗಳಲ್ಲಿ ಮಾರ್ಪಾಡುಗಳನ್ನು ಆಸಕ್ತಿ ಹೊಂದಿರತಕ್ಕ ಜನ, ಬೇಕಾದಷ್ಟು ಪ್ರಮಾಣದಲ್ಲಿ, ಎಲ್ಲಾ ಕಾಲದಲ್ಲೂ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಆದುದರಿಂದ, ನಿಬ್ಬಂದಿಗೆ ಆಗತಕ್ಕ ಖರ್ಚನ್ನು ಉಳಿಸತಕ್ಕ ಆತುರದಲ್ಲಿ ಪತ್ರಗಳನ್ನಿಡುವ ವಿಧಾನದಲ್ಲಿ ಏನು ಧಕ್ಕೆ ಇದೆ. ಆದನ್ನು ತಪ್ಪಿಸಿ, ಅಪಾಯದ ಮಾರ್ಗವನ್ನು ಹುಡಿಯಬೇಡಿ ಎನ್ನುವುದು ನಾನು ಸರ್ಕಾರಕ್ಕೆ ನೀಡುವ ಸ್ಪಷ್ಟ ಸೂಚನೆ. ಈಗ ಪತ್ರ ರಿಜಿಸ್ಟರ್ ಮಾಡಿಸುವವರು ಪತ್ರದ ಒಂದು ಪ್ರತಿಯನ್ನು ಆಫೀಸಿನಲ್ಲಿಯೇ ಇಡಬೇಕೆಂದು ಇದೆ. ಮತ್ತೆ ಮತ್ತಿದ ಇನ್ನೊಂದು ಪ್ರತಿಯನ್ನು ಈಗ ತರುತಾನೆ ಅದು ಕಳೆದುಹೋಯಿತೆಂದೂ, ಇನ್ನೊಂದು ನಕಲು ಬೇಕು ಎಂದು ಅತ ಪುನಃ ಸಬ್ ರಿಜಿಸ್ಟ್ರಾರ್, ಆಫೀಸಿಗೆ ಹೋಗಿ, ಅಲ್ಲಿನ ಸಬ್ ರಿಜಿಸ್ಟ್ರಾರೊಂದಿಗೆ ಪರೀಕ್ಷಾಗಿ, ಒಂದು ಹೊಸ ಪತ್ರವನ್ನೇ ನಿರ್ಮಾಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಅಷ್ಟೇ ಅಲ್ಲದೆ, ಹಾಲಿ ಇರತಕ್ಕ ಕೆಲವು ಪತ್ರಗಳನ್ನು ತಿದ್ದಿ, ತಮಗೆ ಅನುಕೂಲವಾಗುವ ರೀತಿಯಲ್ಲಿ ಬದಲಾಯಿಸಿಕೊಳ್ಳುವುದಕ್ಕೆ ಅವ ಕಾಶವಿದೆ. ಇದು ಬಹಳ ಅಪಾಯಕಾರಿಯಾದುದು. ನಮ್ಮ ದೇಶದಲ್ಲಿರುವವರಲ್ಲಿ ಬಹುಪಾಲು ಅವಿದ್ಯಾವಂತರೇ ಇದ್ದಾರೆ. ಪತ್ರಬರೆಯುವರು, ಭೋಗ್ಯ ಪತ್ರವೆಂದು ಹೇಳಿ, ಕ್ರಯಪತ್ರವನ್ನೇ ಬರೆಯುವ ಪ್ರಸಂಗಗಳು ಇವೆ. ಹೀಗಿದ್ದರೂ ಪೋಸ್ ನಡೆಯುತಾ ಇರುವಾಗ, ಇನ್ನು ಎರಡು

ಪತ್ರಗಳನ್ನು ರಿಜಿಸ್ಟ್ರಾರ್ ಆಫೀಸಿಗೆ ತೆಗೆದು ಕೊಂಡು ಹೋಗುವುದು, ಒಂದನ್ನು ಅಲ್ಲಿ ಇಟ್ಟರುವುದು, ಮತ್ತೊಂದನ್ನು ಮುದ್ರೆ ಒತ್ತಿಸಿ ತೆಗೆದುಕೊಂಡು ಬರುವುದು—ಇದು ಹೇಗೆ ಸಾಧ್ಯವಾಗುತ್ತದೆ ? ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿರುವ ಪತ್ರಕ್ಕೆ ಗ್ಯಾರಂಟಿ ಏನು ? ಆದುದರಿಂದ, ನಾವು ಈ ಮಸೂದೆ ಬಹಳ ಸರಳವಾಗಿದೆ ಎಂದು ತಿಳಿದು ಕೊಂಡರೂ, ಇದು ಬಹಳ ಅಪಾಯಕಾರಿ ಎಂದು ಗೋತ್ತಾಗುತ್ತದೆ. ಅದಕ್ಕಾಗಿ, ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯಲ್ಲಿ ಬಹಳ ಮುಖ್ಯವಾದಂತಹ ಒಂದು ಆಂಶ, ದಾಖಲೆಪತ್ರಗಳನ್ನು ರಿಜಿಸ್ಟ್ರೇಷನ್ ಮಾಡಿಸುವಾಗ, ಆದರ ನಕಲುಗಳನ್ನು ರಿಜಿಸ್ಟರ್ ಮಾಡಿಸುವವರು ರಿಜಿಸ್ಟರ್ ಆಫೀಸಿನಲ್ಲಿ ಹಾಜರುಪಡಿಸಬೇಕು. ಅದರ ಒಂದು ನಕಲನ್ನು ಕಛೇರಿಯಲ್ಲಿ ಇಡಬೇಕು. ಮಾನ್ಯ ಕೃಷ್ಣಪ್ಪನವರು ಹೇಳಿದಹಾಗೆ ಇದರಲ್ಲಿಯೂ ಕೆಲವು ಅಪಾಯಗಳು ಇವೆ. ಆವರು ಮಾಡಿಕೊಡುವುದರಲ್ಲಿಯೂ ಅಪಾಯ ಇರಬಹುದು, ನಾವು ಮಾಡಿಕೊಡುವುದರಲ್ಲಿಯೂ ಇರಬಹುದು. ಈ ಮಸೂದೆಯ ಪ್ರಕಾರ ಡಾಕ್ಯುಮೆಂಟ್ಸ್ ಬರೆಯುವವರು ತಾವೇ ನಕಲು ಒಂದು ಮತ್ತು ಟ್ರೂಕಾಪಿ ಒಂದು ತಯಾರು ಮಾಡಬೇಕು. ಒಮ್ಮೆಕ್ಕೊಂದು ಸರಿ ಇದೆಯೇ ಎನ್ನುವುದನ್ನು ನೋಡಿ ರಿಜಿಸ್ಟರ್ ಮಾಡಬೇಕಾಗುತ್ತದೆ. ಎರಡು ಕಾಪಿಯನ್ನು ಕೂಡ ರಿಜಿಸ್ಟರ್ ಆಫೀಸಿನಲ್ಲಿ ಕೋಡುತ್ತಾರೆ. ರಿಜಿಸ್ಟರ್ ಹಾಡಿದ ಮೇಲೆ, ರಿಜಿಸ್ಟರ್ ಮಾಡಿಸುವವರಿಗೆ ಒಂದು ಕಾಪಿ ಕೊಡುತ್ತಾರೆ. ಒಂದು ಕಾಪಿಯನ್ನು ಆಫೀಸಿನಲ್ಲಿ ಇಟ್ಟುಕೊಳ್ಳುತ್ತಾರೆ. ಆಫೀಸಿನಲ್ಲಿರತಕ್ಕ ನಕಲನ್ನು ಫೈಲು ಮಾಡಿ ಇಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರುವ ಕ್ರಮ ಪತ್ರ ರಿಜಿಸ್ಟರ್ ಮಾಡಲು ತೆಗೆದು ಕೊಂಡು ಹೋದರೆ, ಆ ಪತ್ರವನ್ನು ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಒಂದನೇ ಪುಸ್ತಕದಲ್ಲಿ ಬರೆದು ಕೊಂಡು, ಅದಾದಮೇಲೆ ವಾಪಸ್ಸು ಕೊಡುತ್ತಿದ್ದರು. ಬದಲಾವಣೆ ಮಾಡಿರತಕ್ಕ ಕಾನೂನು ಪ್ರಕಾರ ಒರಿಜನಲ್ ಮತ್ತು ಟ್ರೂ ಕಾಪಿಯನ್ನು ಇಟ್ಟು ಕೊಂಡು ರಿಜಿಸ್ಟರ್ ಮಾಡಿ ಕೊಡುತ್ತಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಅದನ್ನೇ ಫೈಲು ಮಾಡಿ ಇಡುತ್ತಾರೆಯೇ ? ಪ್ರತ್ಯೇಕವಾಗಿ ಪುಸ್ತಕದಲ್ಲಿ ಬರೆದುಕೊಳ್ಳುವುದಿಲ್ಲ, ಇವರಲ್ಲಿಯೂ ಅಪಾಯ ಇಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ, ಅಪಾಯ ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈಗ ಮಾಡಿರತಕ್ಕ ಟೀಕೆಗಳಿಗೆ ನಾನು ಈಗಲೇ ವಿವರಣೆ ಹೇಳುವುದರಿಂದ, ಹೆಚ್ಚಿನ ಟೀಕೆಗಳಿಗೆ ಅವಕಾಶ ವಿರುವುದಿಲ್ಲ ಎಂದು ನನ್ನ ಭಾವನೆ. ಈಗ ಬದಲಾವಣೆಯಾಗತಕ್ಕ ಪದ್ಧತಿಯಲ್ಲಿ ಏನು ಮಾಡುತ್ತಾರೆಂದರೆ, ಮೊದಲು ಇದ್ದಹಾಗೆ ಒಂದನೇ ನಂಬರ್ ಪುಸ್ತಕ ಇರುತ್ತದೆ. ಈ ಪುಸ್ತಕಕ್ಕೆ ನಕಲು ಕಾಪಿಯನ್ನು ಅಂಟಿಸುತ್ತಾರೆ, ಪ್ರತಿಯೊಂದು ಪುಟಕ್ಕೂ ಮುದ್ರೆ ಒತ್ತುತ್ತಾರೆ. ಅಂಟಿಸಿರತಕ್ಕ ಕಾಪಿಗೂ ಪುಸ್ತಕದಲ್ಲಿ ರತಕ್ಕ ಕಾಪಿಗೂ ಎರಡಕ್ಕೂ ಮುದ್ರೆ ಬೀಳುವ ಹಾಗೆ ಮುದ್ರೆ ಹಾಕುತ್ತಾರೆ. ಪ್ರತಿಯೊಂದು ಪುಟದಲ್ಲಿಯೂ ಯಾವುದಾದರೂ ವ್ಯತ್ಯಾಸ ಇದ್ದರೆ ಗೊತ್ತಾಗಬೇಕು, ಹಾಗೆ ಮಾಡಿ ಅದನ್ನು ಕೊಡುತ್ತಾರೆ. ಇದರ ಜೊತೆಗೆ ಸರ್ಕಾರದಿಂದಲೇ ಬರೆಯತಕ್ಕಂಥ ಕಾಗದಗಳನ್ನೂ, ಬೇಗೆ ಮಾಸಿ ಹೋಗದೇ ಇರತಕ್ಕಂಥ ಇಂಕನ್ನು ಒದಗಿಸಿಕೊಡುತ್ತಿದ್ದೇವೆ. ಕಳೆದ 7-8 ವರ್ಷಗಳಿಂದಲೂ ಮದ್ರಾಸಿನಲ್ಲಿ ಈ ಹೊಸ ಪದ್ಧತಿಯನ್ನು ಜಾರಿಗೆ ತಂದು ಕಾಲ ವ್ಯಯವಾಗತಕ್ಕದ್ದನ್ನೂ ಮತ್ತು ಹಣವನ್ನು ಎರಡನ್ನೂ ಉಳಿಸುವುದಕ್ಕೆ ಸಹಾಯಕವಾಗಿದೆ. ಯಾದ ವಿಧದಲ್ಲಿಯೂ ಹಿಂದೆ ಇದ್ದಂತ ಪದ್ಧತಿಗಿಂತ ಮಾನ್ಯ ಕೃಷ್ಣಪ್ಪನವರು ಹೇಳಿದಹಾಗೆ ಭದ್ರತೆ ವಿಷಯದಲ್ಲಿ ಲೋಪ ಬರುವುದಕ್ಕೆ ಅವಕಾಶ ಇಲ್ಲ. ಅದನ್ನೆಲ್ಲಾ ಯೋಚನೆ ಮಾಡಿ ತಂದಿದ್ದೇವೆ ಎಂದು ಸಭೆಗೆ ತಿಳಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಈ ಪದ್ಧತಿಯನ್ನು ಮದ್ರಾಸನಲ್ಲಿ ಮಾತ್ರವಲ್ಲ, ಕೇರಳದಲ್ಲಿಯೂ ಕೂಡ ಅನುಸರಿಸುತ್ತಿದ್ದಾರೆ. ತಾವು ಹೇಳಿದ ಹಾಗೆ ಇಲ್ಲಿಯತನಕ ಯಾವ ಅಕ್ಷೇಪಗಳು ಹೆಚ್ಚು ಕಡಿಮೆ ಸರ್ಕಾರಕ್ಕೆ ಬಂದಿಲ್ಲ, ಸಾರ್ವಜನಿಕರಿಗೂ ಬಂದಿಲ್ಲ. ಇದರಿಂದ ರಿಜಿಸ್ಟರ್ ಮಾಡಿಸುವವರಿಗೆ ಪತ್ರ ಕೂಡಲೇ ಸಿಕ್ಕುವುದಕ್ಕೆ ಅನುಕೂಲವಾಗುತ್ತದೆ, ಕೆಲಸವೂ ಸುಲಭವಾಗುತ್ತದೆ, ತೊಂದರೆ ಏನು ಆಗುವುದಿಲ್ಲ. ಆದರೂ ತಾವು ಈ ವಿಚಾರದಲ್ಲಿ ಎಚ್ಚರಿಕೆ ವಹಿಸಲೇ ಬೇಕು. ಇನ್ನೊಂದು ವಿಚಾರ ಶಾಸನವನ್ನು ಯೂನಿಫಾರಂ ಆಗಿ ಇಡೀ ರಾಜ್ಯಕ್ಕೆ ಒಂದೇ ಕಾಯಿದೆಯನ್ನು ಜಾರಿಗೆ

ತರುವ ದೃಷ್ಟಿಯಿಂದ ಈ ಮಸೂದೆಯನ್ನು ತರುತ್ತಿದ್ದಾರೆ. ಒಂದೇ ರಾಜ್ಯದಲ್ಲಿ ಬೇರೆ ಬೇರೆ ಶಾಸನಗಳು ಬೇರೆ ಬೇರೆ ಕಾಯಿದೆಗಳು ಇರುವುದರಿಂದ ಬಹಳ ತೊಂದರೆಯಾಗುತ್ತದೆ. ಉದಾಹರಣೆಗೆ ಮಂಗಳೂರಿನಲ್ಲಿ ಮುನಿಸಿಪಲ್ ಹೆರಿಟೇಜ್ ಆಕ್ಟ್ ಎಂದು ಇದೆ, ಆದೂ ಇನ್ನೂ ಬದಲಾವಣೆಯಾಗಿಲ್ಲ.

ನಾನು ಮದ್ರಾಸ್ ಪ್ರದೇಶದಿಂದ ಬಂದಿರುವವನಾದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿರುವಂತ ಶಾಸನಗಳು ಅಲ್ಲಿ ಜಾರಿಗೆ ಬಂದಿರುವುದಿಲ್ಲ. ಒಂದೇ ರೀತಿಯ ಕಾಯಿದೆಯನ್ನು ಎಷ್ಟು ಇಲಾಖೆಗಳಿಗೂ ತರುತ್ತೀರೊ ಷ್ಟು ಜನಗಳಿಗೆ ಅನುಕೂಲವಾಗುತ್ತದೆ. ತಾವು ಈ ಬಿಲ್‌ನ್ನು ತಂದಿದ್ದಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಕಾಗದಪತ್ರಗಳನ್ನು ಬರೆಯುವವರು ಲೈಸೆನ್ಸ್ ಪಡೆಯಬೇಕು ಎಂದು ಈ ಮಸೂದೆಯಲ್ಲಿ ಸೇರಿಸಿದ್ದಾರೆ, ಇದೂ ಕೂಡ ಸೂಕ್ತವಾದುದು. ಏಕೆಂದರೆ ಈಗ ಯಾರು ಯಾರು ಬರೆಯುತ್ತಾರೋ, ಯಾವ ರೀತಿ ಬರೆಯುತ್ತಾರೋ, ಅದಕ್ಕೆ ನಿಯಮ ಕೂಡ ಇಲ್ಲ. ಬರೆಯುವವರು ನಾಳೆ ಸಾಕ್ಷಿ ವಗೈರೆ ಕೊಡಬೇಕಾದರೆ ಅವರು ಕೈಗೆ ಸಿಕ್ಕುವುದಿಲ್ಲ. ಬರೆಯುವವರಿಗೆ ಲೆಸೆನ್ಸ್ ಕೊಡುವುದು ಅಷ್ಟೇಅಲ್ಲ, ಅವರ ಮೇಲೆ ಹತೋಟಿ ಇಟ್ಟುಕೊಂಡರೆ ಚೆನ್ನಾಗಿ ಇರುತ್ತದೆ, 10-15 ದಿವಸಗಳ ಮಟ್ಟಿಗೆ ಅವರಿಗೆ ತಕ್ಕ ಮಟ್ಟಿನ ತರಬೇತಿ ಕೊಡುವ ವ್ಯವಸ್ಥೆ ಮಾಡಿದರೆ ಇನ್ನೂ ಒಳ್ಳೆಯದೆಂದು ಕಾಣುತ್ತದೆ.

ಕೊನೆಯದಾಗಿ ಹೇಳಬೇಕಾದರೆ, ಜಮೀನನ್ನು ಕ್ರಯಕ್ಕೆ ಕೊಡುವಾಗ ಮೌಲ್ಯವನ್ನು ಕಡಿಮೆ ಮಾಡುವ ವಿಚಾರ. ಸರ್ಕಾರಕ್ಕೆ ಬರತಕ್ಕ ವರವಾನ ಇದರಿಂದ ತಪ್ಪಿಹೋಗುತ್ತಿತ್ತು. ಇದನ್ನು ತೊಡೆದುಹಾಕಲು ಈ ಮಸೂದೆಯಲ್ಲಿ ನಿಯಮವನ್ನು ಸೇರಿಸಿದ್ದಾರೆ. ಡೆಪ್ಯೂಟಿ ಕಮೀಷನರ್‌ರವರಿಗೆ ವರದಿ ಮಾಡಿ, ಅವರು ಸರಿಯಾದ ಮೌಲ್ಯವನ್ನು ನಿರ್ಧಾರ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ ಒಳ್ಳೆಯದು. ಕಳೆದ 2-3 ವರ್ಷಗಳಲ್ಲಿ ಮುಖ್ಯವಾಗಿ ಭೂಸುಧಾರಣಾ ಶಾಸನ ಜಾರಿಗೆ ಬರುವುದಕ್ಕಿಂತ ಮುಂಚೆ ಮತ್ತು ಜಾರಿಗೆ ಬಂದಮೇಲೆ ಅನೇಕ ಜನ ಗೇಣಿದಾರರಿಗೆ, ಜಮೀನಿನ ಮಾಲೀಕರು ಕ್ರಯಕ್ಕೆಂದುಕೊಟ್ಟು ಅವರಿಂದ ಹಣ ವಸೂಲಿ ಮಾಡಿದ್ದಾರೆ. ಕಾನೂನುಪ್ರಕಾರ ಅವರಿಗೆ ಕೊಡುವುದಕ್ಕೆ ಬರುವುದಿಲ್ಲ, ಬೇತರ ಬಗ್ಗೆ ಕನಿಕರತೋರಿಸಿ ಆ ಭೂಮಿಯನ್ನು ಕೊಡಬಹುದು. ಅದರೂ ಹಣವನ್ನು ವಾಪಸ್ಸು ಪಡೆಯಲಿಕ್ಕೆ ಆಗುವುದಿಲ್ಲ. ಭೂಮಾಲಿಕರಿಗೆ ಹೆಚ್ಚು ಹಣ ಕೆಗೆದುಕೊಳ್ಳುವುದರಿಂದ ಅವರಿಗೆ ಲಾಭವಾಗುತ್ತದೆ.

ಇಂಥಾದ್ದು ಅನೇಕ ಕ್ರಯಪತ್ರಗಳು ಈಗಾಗಲೇ ಆಗಿವೆ. ಇಂಥಾ ಕ್ರಯಪತ್ರಗಳನ್ನು ಮಾಡುವಾಗ ಹಾದೆ ಆದುದನ್ನು ಯಾವರೀತಿ ರದ್ದು ಮಾಡುವುದಕ್ಕಾಗುತ್ತದೆ ? ಬಹಳ ಕಷ್ಟ ಇನ್ನು ಮುಂದಕ್ಕಾದರೂ ಕೂಡ ಇದು ಆಗದೇ ಇದ್ದ ಹಾಗೆ ಮಾಡುವುದಕ್ಕೆ ನನ್ನ ಒಂದು ಸಲಹೆ ಏನೆಂದರೆ ಈ ಭೂನ್ಯಾಯ ಮಂಡಲಿ ಅಧ್ಯಕ್ಷರು ಅಸಿಸ್ಟೆಂಟ್ ಕಮೀಷನರ್ ಏನು ಇದ್ದಾರೆ ಅವರು ಇಂಥಾ ಕ್ರಯಪತ್ರಗಳನ್ನು ಮುಂಚೆ ಮಾಡುವಾಗ ಭೂ ಶಾಸನದ 48 (ಎ) ಸೆಕ್ಷನ್ ಪ್ರಕಾರ ಈತನ ಅರ್ಜಿ ಟ್ರಿಬ್ಯೂನಲ್‌ಗೆ ಬಂದಿಲ್ಲ, ಈ ನರ್ವೆ ನಂಬರ್ ಇದಕ್ಕೆ ಸಂಬಂಧಪಟ್ಟದ್ದಲ್ಲ, ಆಂತ ಈ ಒಂದು ಸರ್ಟಿಫಿಕೇಟನ್ನು ಟ್ರಿಬ್ಯೂನಲ್ ಅಧ್ಯಕ್ಷರಿಂದ ಪಡೆದು ರಿಜಿಸ್ಟರ್ಡ್ ಮಾಡುವ ಒಂದು ವ್ಯವಸ್ಥೆ ಮಾಡಿದರೆ ಅನಕೂಲವಾಗುತ್ತದೆ ಅಲ್ಲದೆ ಈ ಭೂಮಿಯ ಬಗ್ಗೆ ಅಗತಕ್ಕಂಥ ಅನೇಕ ಅವ್ಯವಹಾರಗಳನ್ನು ತಡೆಗಟ್ಟಬಹುದು. ಈ ಕೆಲಸ ಮಾಡಬೇಕು. ಇಷ್ಟೊಂದು ಸಲಹೆಯನ್ನು ಕೊಟ್ಟು ಈ ಮಸೂದೆಗೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

† ಶ್ರೀ ಕಾಗೋಡು ತಿಮ್ಮಪ್ಪ. (ಸಾಗರ) ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿ ವಿಧೇಯಕದಲ್ಲಿ ಹೊಸ ವಿಚಾರಗಳನ್ನು ತಂದಿದ್ದಾರೆ. ಇದರಲ್ಲಿ ಮುಖ್ಯವಾಗಿ ಪತ್ರಗಳನ್ನು ರಿಜಿಸ್ಟರ್ಡ್ ಮಾಡತಕ್ಕಂಥಾ ಕಾಲದಲ್ಲಿ ಅದರ ನಕಲನ್ನು ಓದಿಸತಕ್ಕಂಥಾದ್ದು ಹಾಗೇಯೇ ಪತ್ರವನ್ನು ಬರೆಯತಕ್ಕಂಥವರು ಕೂಡ ಅವರು ವಕೀಲರಾಗದೇ ಇದ್ದ ಪಕ್ಷದಲ್ಲಿ ಅವರು ಪತ್ರವನ್ನು ಬರೆಯುವುದಕ್ಕೆ ಲೈಸನ್ಸ್ ಪಡೆಯತಕ್ಕದ್ದು ಈ ಹೊಸ ಬದಲಾವಣೆಗಳನ್ನು ತಂದಿದ್ದಾರೆ. ಇದರಲ್ಲಿ ನಾನು ಮುಖ್ಯವಾಗಿ ಹೇಳುವುದು ಪತ್ರಗಳನ್ನು ಬರೆಯುವ ವಿಷಯದಲ್ಲಿ ಹೇಳುತ್ತೆನೆ. ಅವರು ಲೈಸನ್ಸ್ ಪಡೆಯಬೇಕು ಎಂದರೆ ಸ್ವಲ್ಪ ಕಷ್ಟ ಆಂತ ನನಗೆ ಕಾಣುತ್ತದೆ ಕಾರಣ ಏನೆಂದರೆ

ಹಿಂದೆ ನಮ್ಮ ಹಳೆಯ ಶ್ಯಾನುಬೋಗರುಗಳು ಏನು ಇದ್ದಾರೆ ಅವರ ಹತ್ತಿರ ಆ ಊರಿನ ಜನಗಳು ಹೋಗಿ ಕ್ರಯ ಪತ್ರ ಬರೆಸುತ್ತಿದ್ದರು ಕಾರಣ ಏನೆಂದರೆ ಅವರಿಗೆ ಆಜಮೀನಿನ ಚಾತಪ್ಪು ಅಕಾರ ವಗೈರೆಗಳು ತಿಳಿದಿರುತ್ತಿತ್ತು ಅಲ್ಲದೆ ಅವರು ಚನ್ನಾಗಿ ಬರೆಯುತ್ತಿದ್ದರು. ಆ ಕಾಗದಗಳು ಕೂಡ ರಿಜಿಸ್ಟರ್ಡ್ ಆಗುತ್ತಿದ್ದವು ಹೀಗೆ ಅವರು ಲೈಸನ್ಸ್ ಪಡೆಯದೇ ಇರತಕ್ಕಂಥ ಬರೆದಂಥಾ ಪತ್ರವು ಇದುವರಿಗೂ ಯಾವುದುಕೂಡ ಅದರಲ್ಲಿ ಒಂದು ಅಪಖ್ಯಾತಿಯಾಗಲಿ ಅಥವಾ ಒಂದು ಅನುಮಾನ ವಾಗಲಿ ಬಂದಿಲ್ಲ. ತದನಂತರ ಈಡೆಗೆ ಅವರು ಬಿಟ್ಟಿಮೇಲೆ ಬೇರೆ ಡಾಕುಮೆಂಟರಿ ರೈಟರ್ಸ್ ಏನು ಇದ್ದಾರೆ ಅವರು ಎಲ್ಲೋ ಒಂದು ಜಾಗದಲ್ಲಿ ಕೂತುಕೊಂಡು ಬರೆಯುತ್ತಾರೆ. ಸಾಮಾನ್ಯವಾಗಿ ನನಗೇ ಗೊತ್ತಿರುವ ಹಾಗೆ ಹೇಳುವುದಾದರೆ ನಾನು ಮನೆಯಲ್ಲಿ ಕೂತಿಕೊಂಡಿರುತ್ತೀನೆ ಅಂತ ತಿಳಿದುಕೊಳ್ಳಿ ನಮ್ಮ ಹಿಸ್ಸೆ ಪತ್ರ ಅಥವಾ ಕ್ರಯಪತ್ರ ಮಾಡಬೇಕಾದರೆ ಆಲ್ಲಿಯ ಪಂಚಾಯಿತಿಯ ವರನ್ನು ಕರೆಯುತ್ತೇವೆ ಅವರು ಏನು ತೀರ್ಮಾನ ಮಾಡುತ್ತಾರೆ ಅದನ್ನು ಬರೆಸಬೇಕಾದರೆ ಆಲ್ಲಿ ಕೂತುಕೊಂಡಿರುವ ಯಾವನೋ ಒಬ್ಬ ಹುಡುಗನ್ನು ಕರೆದು ನಾವು ಈ ರೀತಿ ಹೇಳುತ್ತೇವೆ ಅದಂರತೆ ಬರೆಯಬೇಕು ಅಂತ ಹೇಳಿಅವನ ಕೈಯಲ್ಲಿ ಬರೆಸುತ್ತೇನೆ. ಅವನೂ ಕೂಡ ಲೈಸನ್ಸ್ ತೆಗೆದುಕೊಳ್ಳಬೇಕು ಬಹಳ ಕಷ್ಟವಾಗುತ್ತದೆ. ಅವನು ಡಾಕ್ಯುಮೆಂಟರಿ ಬರೆಯಬೇಕಾದರೆ ಅವನು ಲೈಸನ್ ತೆಗೆದುಕೊಳ್ಳಬೇಕು ಅನ್ನುವುದಾದರೆ ಆವರಿಗೆ ಒಂದು ಕ್ವಾಲಿಫಿಕೇಷನ್ ಇಡಿಆವರಿಗೆ ಯಾವ ಕ್ವಾಲಿ ಫಿಕೇಷನ್ ಕೂಡ ಬೇಡಆದರೆ ಅವನುಲೈಸನ್ಸ್ ತೆಗೆದುಕೊಳ್ಳಬೆಕಾವ ಅವಶ್ಯಕತೆ ನನಗೆಕಂಡು ಬರುವುದಿಲ್ಲಅವರುಲೈಸನ್ಸ್ಪಡೆಯಬೇಕು ಅನ್ನುವುದಾದರೆಅವರಿಗೆಒಂದು ಕ್ವಾಲಿಫಿಕೇಷನ್ ಡಿ ಇವೊತ್ತು ರಾಜ್ಯದಲ್ಲಿ ಈ ಡಾಕ್ಯುಮೆಂಟರಿ ರೈಟರ್ಸ್‌ಗೆ ಏನಾದರೂ ಟ್ರೈನಿಂಗ್ ಇದೆಯೇ ಹೇಳಿ. ಪರಿಣತರಾದಂಥವರು ಏನಾದರೂ ಲೈಸನ್ಸ್‌ಕೂಡದೆ ಬರೇ ಸರ್ಟಿಫಿಕೇಟ್‌ಗಳನ್ನು ಕೊಡುವ ಲೈಸನ್ಸಿಂದಲೇ ಅವನು ಡಾಕ್ಯುಮೆಂಟರಿ ಬರೆಯುವುದಕ್ಕೆ ಲೈಸನ್ಸ್ ಆಗುತ್ತಾನೆ ಅನ್ನುವುದಾದರೆ ಏನು ಅರ್ಥ? ಈ ಇಂಥಾ ಒಂದು ಲೈಸನ್ಸನ್ನು ಕೊಡುವ ವ್ಯವಸ್ಥೆ ತಂದಿದ್ದೀರಲ್ಲಾ ಈ ಡಾಕ್ಯುಮೆಂಟರಿ ರೈಟರ್ಸ್‌ಗೆ ಏನೂ ಒಂದು ತರಬೇತಿಯೂ ಇಲ್ಲದೆ ಅವನಿಗೆ ಲೈಸನ್ಸ್ ಕೊಡುವುದಾದರೆ ಆ ಒಂದು ಲೈಸನ್ಸ್‌ನ ಪರಿಸ್ಥಿತಿಏನಾಗುತ್ತದೆ ಅನ್ನುವುದನ್ನು ಯೋಚನೆ ಮಾಡಿ. ಈವೊತ್ತು ಗ್ರಾಮಾಂತರ ಪ್ರದೇಶದಲ್ಲಿ ಈ ಡಾಕ್ಯುಮೆಂಟರಿ ರೈಟರ್ಸ್‌ನ್ನು ನೋಡಿದರೆ ಯಾರು ಯಾರು ಈ ಪತ್ರಗಳನ್ನು ಬರೆಯುತ್ತಾರೆ ಏನು ವ್ಯತ್ಯಾಸ ಇರುತ್ತದೆ ಎನ್ನುವುದು ಗೋತ್ತಾಗುತ್ತದೆ ಈಗಿನ ವಿಲೇಜ್ ಅಕೌಂಟೆಂಟರ್‌ಗಳು ಸರ್ಕಾರೀ ನೌಕರರಾಗಿರುವುದರಿಂದ ಅವರು ಪತ್ರ ಬರೆಯುವುದಿಲ್ಲ. ಈ ಪ್ರೊತ್ಸಾಹದಿಂದ ಅನೇಕ ವಿದ್ಯಾವಂತರು ಪತ್ರವನ್ನು ಬರೆಯುತ್ತಾರೆ. ಅನೇಕ ಲಾಯರ್ಸ್‌ಗಳು ಬರೆಯುತ್ತಾರೆ ಮಾಮೂಲಾಗಿ ಪತ್ರ ಬರೆಯುವವರೂಕೂಡ ಬರೆಯುತ್ತಾರೆ ಈಪತ್ರವನ್ನು ಅನುಭವಇರತಕ್ಕಂತವರೂಬರೆಯುವುದಕ್ಕೂ ಬೇರೆಯವರು ಬರೆಯುವುದಕ್ಕೂ ಎಷ್ಟೋ ವ್ಯತ್ಯಾಸ ಇದೆ ಯಾವ ಲಾಯರ್‌ಗೆ ಆಗಲಿ ಅನುಭವ ಇರತಕ್ಕಂತವರು ಪತ್ರ ಬರೆಯುವ ಹಾಗೆಬೇರೆಯಾರೂ ಬರೆಯುವುದಕ್ಕೆ ಸಾಧ್ಯವಿಲ್ಲ. ನಾನು ತಪ್ಪಾಗೆ ಒಂದು ಉದಾಹರಣೆ ಹೇಳುವುದಾದರೆ ನಮ್ಮ ಅನುಭವನಲ್ಲಿ ಬಂದಿರತಕ್ಕಂಥಾದ್ದು ಹೇಳುತ್ತೇನೆ. ಲೈಸನ್ಸ್ ಪಡೆಯುದೇ ಇರತಕ್ಕಂಥಾ ವ್ಯಕ್ತಿಗಳು ಏನು ಇದ್ದಾರೆ ಅವರು ಈವೂ ತ್ತಿನವರಿಗೆ ಏನು ಪತ್ರಗಳು ಬರೆದಿದ್ದಾರೆ ಅವರಿಂದ ಇದುವರಿಗೆ ಏನಾದರೂ ಅನಾಹುತವಾಗಿದೆಯೇ ಅವರಿಂದ ಏನಾದರು ಅನಾಹುತವಾಗಿದ್ದ ಪಕ್ಷದಲ್ಲಿ ಅದರ ಬಗ್ಗೆ ಸಂಶೋಧನ ಮಾಡತಕ್ಕಂಥಾದ್ದು ಸರಿ ಈವೊತ್ತಿನವರಿಗೂ ಅಂಥಾವ್ಯೇನೂ ಕಂಡುಬಂದಿಲ್ಲವಲ್ಲಾ ಅನೇಕ ಲಾಯರ್‌ಗಳು ಕೂಡ ಕೋರ್ಟಿನಲ್ಲಿ ಈ ಬಗ್ಗೆ ವ್ಯವಹಾರ ಮಾಡಿದಾರೆ ಈವೊತ್ತಿನವರಿಗೂ ಕೂಡ ಈಗ ಲೈಸನ್ಸ್ ಪಡೆಯದೇ ಇರತಕ್ಕಂಥಾವರು ಏನು ಪತ್ರಬರೆದಿದ್ದಾರೋ ಅದರ ಮೇಲೆ ಅನಾಹುತವಾಗಿರುವುದು ಏನು ಕಂಡುಬಂದಿಲ್ಲ. ಇದರಿಂದ ಅನಾಹುತವಾಗುತ್ತದೆ ಎಂದುಶ್ರೀಮಾನ್ ಕಕ್ಕಿಲಾಯ ಅವರುಹೇಳಿದರು. ಈಗ ಜಮೀನು ಕಾನುನುಪ್ರಕಾರಮಾರಾಟಮಾಡ ಬಾರದು ಅಂತ ಇದೆ. ಹಾಗೆಯೇ ಕೆಲವು ಕ್ರಯಪತ್ರಗಳನ್ನು ಬರೆಯುಬಾರದು ಅಂತ ಸರ್ಕಾರ ಅಜ್ಞೆ ಮಾಡಿದ್ದಾರೆ ಅಂಥಾದ್ದನು ಬರೆಯಬಾರದು, ಈವೊತ್ತು ಕೆಲವು ಪತ್ರಗಳನ್ನು ಮಾಡುವುದಕ್ಕೆ ಬರುವುದಿಲ್ಲ್ಲ ಉದಾಹರಣೆಗೆ ಗೇಣಿದಾರರ ಜಮೀನೂ ತೆಗೆದುಕೊಳ್ಳಿ. ಆಗೇಣಿ ಜಮೀನನ್ನು ನನಗೆ ಕೊಡುತ್ತಾನೆ ಅಂತ ಹೇಳುತ್ತಾನೆ ಅಂತ ಇಟ್ಟುಕೊಳ್ಳಿ. ಅದು ಈಗಿನ ಕಾನುನು ಪ್ರಕಾರ ಸರ್ಕಾರಕ್ಕೆ ವೆಸ್ಟ್ ಆಗಿದೆ ಅದನ್ನು ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಇಂಥಾದ್ದನ್ನು ಡಾಕು

ಮೆಂಟರಿ ರೈಟರ್ ಬರೆಯುಬೇಕಾದರೆ ಅವನಿಗೆ ಸ್ವಲ್ಪಕಾನೂನು ಅನುಭವ ಇರಬೇಕು ಇಂಥಾದ್ದನ್ನು ಬರೆದರೆ ಇದರಿಂದ ಪರಿಣಾಮ ಏನಾಗುತ್ತದೆ ಅನ್ನುವುದನ್ನು ಅವನು ಭೂಸುಧಾರಣ ಕಾನೂನು ನೋಡಿ ತಿಳಿದುಕೊಳ್ಳಬೇಕಾಗುತ್ತದೆ ಎಷ್ಟೋ ಜನ ಪಬ್ಲಿಷಣದಲ್ಲಿರುವ ರಾಯರ್ಸ್‌ಗಳಿಗೆಕೂಡ ಬಗ್ಗೆ ಸಾಕಷ್ಟು ಅನುಭವ ಆಗಿಲ್ಲ ಅಲ್ಲದೆ ಅವರಿಗೆ ಈ ಬಗ್ಗೆ ಅಡ್ವೈಸ್ ಮಾಡುವುದಕ್ಕೆ ಬರುವುದಿಲ್ಲ. ಎಸ್. ಎಸ್; ಎಲ್. ಸಿ, ಅದವರು ಕೆಲವರು ಇದರಲ್ಲಿ ಸ್ವಲ್ಪ ಮಟ್ಟಿಗೆ ಅನುಭವವುಳ್ಳತಕ್ಕಂಥಾವರು ಇದನ್ನು ತಿಳಿದುಕೊಂಡಿರುತ್ತಾರೆ ಈಗ ಭದನುಧಾರಣ ಕಾನೂನು ಪ್ರಕಾರ ಗೇಣಿ ಮಾಡಿದತಕ್ಕಂಥಾ ಭೂಮಿಯನ್ನು ಭೂಮಾಲಿಕರಾಗಿರತಕ್ಕಂಥಾವರು ಅಭೊಮಿಯನ್ನು ಕ್ರಯಸಶ್ರ ಮಾಡುವುದಕ್ಕೆ ಬರುವುದಿಲ್ಲ ಎನುವುದನ್ನು ಈ ಡಾಕ್ಯುಮೆಂಟರಿ ಲೈಸನ್ ಪಡೆಯುವ ವ್ಯಕ್ತಿ ತಿಳಿದುಕೊಂಡಿರಬೇಕು ಎಂದು ನಾನು ಭಾವಿಸುತ್ತೇನೆ. ಆದರೆ ಸರ್ಕಾರ ಇದರ ಬಗ್ಗೆ ಯಾವರೀತಿ ಭಾವಿಸುತ್ತದೋ ಗೊತ್ತಿಲ್ಲ. ನೀವು ಇದರ ಬಗ್ಗೆ ಒಂದು ಕ್ಲಾರಿಫಿಕೇಷನ್ ಇಟ್ಟಿರಲ್ಲಿ ಅವರಿಗೆ ಲೈಸನ್ಸ್ ಮಾತ್ರ ಕೊಡುವುದಕ್ಕೆ ಅವರು ಒಂದು ತಗಡು ಅಂಟಿಸುಕೊಳ್ಳುವುದಕ್ಕೆ ಈ ರೀತಿ ಮಾಡುವುದಾದರೆ ನೀವು ಯಾವುದಾದರು ಒಂದು ನಂದರ್ಭದಲ್ಲಿ ನನ್ನ ಜತೆಯಲ್ಲಿ ಬಂದರೆ ನಾನು ತೋರಿಸಿಕೋಡುತ್ತೇನೆ. ಯಾರಾದರೂ ಪತ್ರ ಬರೆಯಬಹುದು. ಆದರೆ ಕ್ರಯಪತ್ರ ಮತ್ತು ಪಾರೀಖತ್ರುಗಳನ್ನು ಮತ್ತು ಹಿಸ್ಸೆ ಪತ್ರಗಳನ್ನು ಇನು ಕೆಲವು ಮುಖ್ಯವಾದ ಪತ್ರಗಳನ್ನು ಬರೆಯಬೇಕಾದರೆ ಅಬಗ್ಗೆ ಚೆನ್ನಾಗಿತಿಳಿದು ಕೊಂಡಿರತಕ್ಕಂಥ ಜನ ಆದರಲ್ಲಿ ತಜ್ಞತೆ ಇರತಕ್ಕಂಥಾ ಜನರು ಬರೆಯಬೇಕು ಏನಾ ಬೇರೆಯವರು ಬರೆದರೆ ಇವರುಗಳು ಬರೆದಂತೆ ಆಗುವುದಿಲ್ಲ. ಅನೇಕ ಲಯರ್ಸ್‌ಗಳು ಬಿ.ಎ.ಎಲ್. ಎಲ್.ಬಿ.ಪಾಸ್ ಮಾಡಿಕೊಂಡಿರತಕ್ಕಂಥವರೂ ಕೂಡ ಬರೆಯುತ್ತಾರೆ. ಆದರೆ ಇವರುಗಳ ಹಾಗೆ ಬರೆಯುವುದಕ್ಕೆ ಬರುವುದಿಲ್ಲ. ಹೇಗೆಂದರೆ ಉದಾಹರಣೆಗೆ ನಾಳೆ ದಿವನ ಶ್ರೀಮಾನ್ ಎನ್. ಹುಚ್ಚಮಾಸ್ತಿಗೌಡರು ತಮ್ಮ ಭಾಗದ ಒಂದು ಹಿಸ್ಸೆ ಪತ್ರವನ್ನು ಬರೆಸಬೇಕಾದರೆ ಅವರೇ ಬರೆಯುವುದಿಲ್ಲ, ಬೇರೆಯವರ ಕೈಯಲ್ಲಿ ಬರೆಸಬೇಕು ಏತಕೆಂದರೆ ಪತ್ರ ಬರೆಯುವದರಲ್ಲಿ ಕೆಲವು ತಜ್ಞರು ಇದ್ದಾರೆ, ಆ ಪತ್ರಗಳನ್ನು ಬರೆಯಬೇಕಾದರ ಕೆಲವು ಅದಕ್ಕೆ ಸರಿಯಾದ ಈಡಿಯಮ್ಸುಗಳು ಇವೆ ಒಂದು ಹರತಕ್ಕವರೀತಿಯಲ್ಲಿ ಬರಯಬೇಕು ಅದರಲ್ಲಿ ಅನುಭವಇರತಕ್ಕಂಥವರೂ ಮಾತ್ರ ಇಂತಹ ಪತ್ರವನ್ನು ಬರೆಯಬೇಕಾಗುತ್ತದೆ ಈ ಬಗ್ಗೆ ಅವರಿಗೆ ಒಂದುಕ್ಲಾರಿಫಿಕೇಷನ್ ಕೊಡುವುದಕ್ಕೆ ನಿಮ್ಮಲ್ಲಿ ಏನು ಅಧಾರ ಇದೆ ಅದನ್ನು ತಿಳಿಸಬೇಕು. ಈ ದೃಷ್ಟಿಯಿಂದ ತಾತ್ಕಾಲಿಕವಾಗಿ ಈ ಲೈಸನ್ಸ್ ಇಡುವ ಪದ್ಧತಿಯನ್ನು ಕೈಬಿಡಬೇಕು ಇದರಿಂದ ಸ್ವಲ್ಪತೊಂದರೆಯಾಗುತ್ತದೆ ಮತ್ತು ಸ್ವಲ್ಪ ಮುಜಗರ ಆಗುತ್ತದೆ ಎಂದು ಹೇಳಹಬಯಸುತ್ತೇನೆ.

ಇನ್ನು ಕೆಲವು ಪತ್ರಗಳನ್ನು ರಿಜಿಸ್ಟರ್ಡ್ ಮಾಡತಕ್ಕಂಥಾ ಕಾಲದಲ್ಲಿ ಪೇಪರ್‌ನ್ನು ಕೊಡುತ್ತೇನೆ. ಇಂಕನ್ನು ಕೊಡುತ್ತೆವೆ ಅವರಲ್ಲಿ ಕಾಪಿ ಮಾಡಿಕೊಡಲು ಆದನ್ನು ಅಂಟಿಸಿಬಿಡೋಣ ಎಂದು ಹೇಳುತ್ತೀರಿ. ನೀವು ಈರೀತಿ ಹೇಳಿದ್ದು ಇದು ಅನೇಕ ಸಂಶಯಕ್ಕೆ ಕಾರಣವಾಗುತ್ತದೆ ಯಾರಾದರು ಕಾಪಿ ಮಾಡಿಕೊಡಲು ಆದನ್ನು ಅಂಟಿಸಿಬಿಡೋಣ ಅಂದರೆ ಇದರಿಂದ ಕೆಲವು ಸಮಯದಲ್ಲಿ ತೊಂದರೆಯಾಗುತ್ತದೆ. ನಾನು ಈಮಾತನ್ನು ಏತಕ್ಕೆ ಹೇಳುತ್ತಿದ್ದೆನೆ ಎಂದರೆಯಾವುದಾದರುಒಂದು ನಂದರ್ಭದಲ್ಲಿ ಅಸಲು ಪತ್ರ ಕಳೆದುಹೋಗುತ್ತದೆ ಅಂತ ಇಟ್ಟುಕೊಳ್ಳೋಣ ಆಸಂದರ್ಭದಲ್ಲಿ ಇರುವುದು ನಕಲು ಒಂದು ಮಾತ್ರ. ಈನಕಲನ್ನು ಅಂಟಿಸುವುದರಿಂದ ಕೆಲವು ಅನಾಹುತಕ್ಕೆಎಡೆ ಮಾಡಿ ಕೊಟ್ಟಂತಾಗುತ್ತದೆ ತಾವುಯಾವುದರಲ್ಲಿಯಾದರೂ ಕೂಡ ಎಷ್ಟು ಸೂಕ್ಷ್ಮಾದಿಗಳಲ್ಲಿ ಸೂಕ್ಷ್ಮವಾಗಿದ್ದರೂ ಕೂಡ ಆದರಲ್ಲಿ ಕಂಡಿಕೂರೆಯೊವಂಥಾ ಜನ ಇದ್ದಾರೆ ಅದನ್ನು ತಿಳಿದುಕೊಳ್ಳಬೇಕು. ಇದಕ್ಕೆ ಒಂದು ಉದಾಹರಣೆ ಕೋಡುತ್ತೇನೆ. ಅದುಒಂದು ಟೆನೆನ್ಸಿ ಕೇಸ್ ಆದರಲ್ಲಿ ಜಮೀನನ್ನು ಒಬ್ಬರಿಗೆ ಸಾಫೀನಕ್ಕೆ ಬಿಟ್ಟುಕೂಟ್ಟಿರು ಅಬಗ್ಗೆತಹಶೀಲ್‌ದಾರರು ಆರ್ಡರ್ ಮಾಡಿದರು. ಆದರೆಅಬಗ್ಗೆಅಸಲು ಕಾಪಿ ಇರಲಿಲ್ಲ.ಆದಕ್ಕಾಗಿ ಶಿರಸ್ತೆದಾರರು ಮತ್ತ ಗುಮಸ್ತರೊಬ್ಬರು ಸೇರಿಕೊಂಡು ಒಂದು ನಟಿಫಿಷ್ಟೆಡ್ ಕಾಪಿಯನ್ನು ತಯಾರು ಮಾಡಿದರು, ಆದರೆ ಕಾಪಿ ಬುಕ್‌ನಲ್ಲಿ ಅಸಲು ಕಾಪಿಯ ಬಗ್ಗೆ ವಿವರವಿಲ್ಲ ಈ ವಿಚಾರ ಈಗ 4-5 ವರ್ಷಗಳಿಂದ ವಿಜಿಲನ್ಸ್ ಮುಂದೆ ಇದೆ. ಅದು ಇನ್ನೂ ಇತ್ಯರ್ಥವಾಗಿಲ್ಲ ಇಂತಹ ಕೆಲಸ ಮಾಡುವ ಕಲೆಮ್ಮುಟ್ಟಿಸಿ ನಮ್ಮಲ್ಲಿದ್ದಾರೆ. ಹಳೆಯ ಇಂಕ್ ಉಪಯೋಗಿಸಿ ಸಹಿ ಮಾಡುವರಿದ್ದಾರೆ, ರಬ್ಬರ್ ಆದ ತಹಶೀಲ್‌ದಾರರನ್ನು ಹುಡುಕಿ ಕರೆದುಕೊಂಡು ಬಂದು ಹಿಂದಿನ ತಾರೀಖಿನ್ನು ಅವರಿಂದ ಹಾಕಿಸಿ ಸಹಿ ಮಾಡಿಸುವವರೂ ಸಹ ಇದ್ದಾರೆ. ಇದೆಲ್ಲಾ ನಡೆಯುತ್ತಿರುವಾಗ ತಾವು ಈಗ ಅಂಟಿಸುವ ಕ್ರಮ ತಗೆದುಕೊಂಡು ಬಂದಿದ್ದೀರಿ. ಈ ಪದ್ಧತಿಗಿಂತ

ಮೊದಲಿನ ಪದ್ಧತಿಯೇ ಚೆನ್ನಾಗಿತ್ತು: ಪುಸ್ತಕದಲ್ಲಿ ಬರೆದಿರುವುದೇ ನರಿ ಏಕೆಂದರೆ ಆದರಲ್ಲಿ ಪೇಜ್ ನಂಬರ್ ಇರುತ್ತದೆ ಆದಕಾರಣ ಅದನ್ನು ಹರಿಮುಡಿಪುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಈಗ ಕಾಗದದಲ್ಲಿ ಬರೆದುಅಂಟಿಸುವುದರಿಂದ ಮೊದಲಿನಷ್ಟು ಭದ್ರತೆ ಇರುವುದಿಲ್ಲ. ಆ ಒಂದು ಭದ್ರತೆಗೆ ಕೊರತೆ ಬೀಳಬಹುದುಇಂತಹ ಅನುಮಾನಗಳು ನನಗೆ ಬಹಳವಾಗಿ ಕಾಣಬರುತ್ತಿದೆ.ಈಕೊನೆಪದ್ಧತಿ ಮಾನ್ಯ ಸಚಿವರಿಗೆಯಾವ ರೀತಿ ಹೊಳೆಯಿತೋ ನನಗೆ ತಿಳಿಯುತ್ತಿಲ್ಲ. ಈ ಪದ್ಧತಿ ಮದ್ರಾಸಿನಲ್ಲದೆ ಎಂದುಹೇಳಿದರು ಆದರೆ ಮುಂಬ್ಯನಲ್ಲಿರುವ ಪದ್ಧತಿ ಚೆನ್ನಾಗಿದೆ ಎಂದು ನಾನು ಕೇಳಿದೆ ನೆ.

ಒಬ್ಬರು ಸದಸ್ಯರು; ಅಲ್ಲಿ ಹೋಗಿ ಸ್ಯಾಂಪಲ್ ಪದ್ಧತಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಜಾರಿಗೆ ತಂದರೆ ಹೋಟೂರೀ ಹಿಡಿಯುವವರು ಯಾರು ಪತ್ರ ಬರೆಯಲು ಇಂಕ್ ಕೊಡಲಾಗುತ್ತದೆಂದು ಹೇಳಿದಿರಿ ಆದನ್ನು ಯಾರ ಹತ್ತಿರ ಕೊಡುತ್ತಿರಿ ಆದನ್ನು ಯಾರ ಮುಖಾಂತರ ನಾವು ಪಡೆದು ಕೂಳ್ಳಬೇಕು ಪತ್ರ ಬರೆಯಲು ಲೈಸನ್ಸ್ ಪಡೆಯುವವರಿಗೆ ಇಂಕೆ ಕೊಡುತ್ತೀರಾ ಹೇಗೆ ಎಲ್ಲಾ ಪ್ರಶ್ನೆಗಳು ಇಲ್ಲಿ ಉದ್ಭವವಾಗುತ್ತವೆ, ಈ ಹೊಸ ಪದ್ಧತಿ ಜಾರಿಗೆ ತರುತ್ತಿರುವುದರ ಉದ್ದೇಶವಾದರು ಏನು ಪೋನ್ನೆ ಮಾನ್ಯ ಮುಖ್ಯಮಂತ್ರಿಗಳು ಹೆಲ್ಮೆಟ್ ಧರಿಸದಿದ್ದರೆ ತಲೆಗೆ ಹೊಡೆತ ಬೀಳುತ್ತದೆ, ಅದಕಾರಣ ಎಲ್ಲರೂ ಕಡ್ಡಾಯವಾಗಿ ಅದನ್ನು ಧರಿಸಬೇಕೆಂದು ಹೇಳಿದರು ಆದಕ್ಕಾಗಿ ನಾನು ನಮ್ಮ ರಾಜ್ಯದಲ್ಲಿ ಇಲ್ಲಿಯವರಿಗೆ ಹೆಲ್ಮೆಟ್ ಇಲ್ಲದೆ ಪ್ರಯಾಣ ಮಾಡುವಾಗ ಎಷ್ಟು ಜನ ಸ್ಕೂಟರ್‌ನಿಂದ ಕೆಳಗೆ ಬಿದ್ದಿದ್ದಾರೆ ಮತ್ತು ತಲೆಗೆ ಎಷ್ಟು ಬಿದ್ದು ಎಷ್ಟು ಜನ ಸತ್ತಿದಾರೆಂಬ ಬಗ್ಗೆ ಒಂದು ಪ್ರಶ್ನೆ ಕೇಳಿದ್ದೇನೆ, ಹೆಲ್ಮೆಟ್ ತಯಾರುಮಾಡುವ ಒಂದು ಕಂಪನಿಯನ್ನು ಯಾರೋ ಪ್ರಾರಂಭ ಮಾಡಿದ್ದಾರೆಂದು ಅಲ್ಲಿ ತಯಾರಾದ ಹೆಲ್ಮೆಟ್‌ಗಳು ಖರ್ಚಾಗದ ಕಾರಣ ಈ ರೀತಿ ಅಜ್ಞೆ ಮಾಡಿದ್ದಾರೆಂದು ನಾನು ಕೇಳಿದ್ದೇನೆ ಅದೇ ರೀತಿ ಇಲ್ಲಿಯೂ ಯಾರಿಗೋ ಅನುಕೂಲ ಮಾಡಿಕೊಡಲು ಈ ಹೊಸ ಪದ್ಧತಿ ಜಾರಿಗೆ ತರುತ್ತಿರುವಂತೆ ಕಾಣುತ್ತದೆ ಇಲ್ಲ ಇಂಕನ್ನು ಪತ್ರ ಬರೆಯಲು ಕೊಡಲಾಗುತ್ತದೆಂದು ಹೇಳಿದ್ದಿರಿ. ಆ ಇಂಕ್ ತಯಾರು ಮಾಡಲು ಯಾರಿಗೆ ಹೇಳಿದ್ದಿರಿ ಹಳ್ಳಿಗಳ ಕಡೆ ಅಳಲೆಕಾಯಿನಿಂದ ಇಂಕ್ ತಯಾರು ಮಾಡುತ್ತಾರೆ, ಅದರಲ್ಲಿ ಬರೆದರೆ ನೂರು ವರ್ಷಗಳಾದರೂ ಅಳಿಸಿಹೋಗುವುದಿಲ್ಲ ಅದಕಾರಣ ಅಂತಹ ಇಂಕ್ ತಯಾರು ಮಾಡ್ಲು ವುದಕ್ಕೆ ತಾವು ಅವಕಾಶ ಮಾಡಿಕೊಡಿ ಈಗ ಕೆಲವು ಕಂಪನಿಯವರು ಇಂಕ್ ತಯಾರು ಮಾಡುತ್ತಾರೆ ಅದರಲ್ಲಿ ಬರೆದರೆ ಕೆಲವು ದಿನಗಳ ನಂತರ ಕಾಣುವುದೇ ಇಲ್ಲ ಎರಡು ತಿಂಗಳು ಕಳೆದ ಮೇಲೆ ನೋಡಿದರೆ ಅಲ್ಲಿ ಬರೆದಿರುವುದೇ ಕಾಣುವುದಿಲ್ಲ ಇಂತಹ ಎರಡು ಮೂರು ಕೇಸುಗಳು ನಡದಿರುವುದನ್ನು ನಾನೇ ನೋಡಿದ್ದೇನೆ, ಈಗ ಬಿಲೆಜ್ ಅಕೌಂಟೆಂಟ್‌ಗಳು ಪಹಣಿ ಲೆಕ್ಕ ಬರೆಯಲು ಒಂದು ತರಹ ಇಂಕ್ ಇಟ್ಟುಕೊಂಡಿದ್ದಾರೆ ಈ ರೀತಿಯಲ್ಲಾ ಅನ್ಯಾಯಗಳು ನಡೆಯುತ್ತಿರುವಾಗ ಈ ಹೊಸ ಪದ್ಧತಿಯನ್ನು ಜಾರಿಗೆ ತರುತ್ತಿರುವುದು ಸರಿಯಲ್ಲವೆಂದು ಹೇಳುತ್ತೇನೆ. ಈ ರೀತಿ ಬದಲಾವಣೆ ಮಾಡುವುದಕ್ಕೆಮೊದಲು ಬೇರೆ ಬೇರೆ ರಾಜ್ಯಗಳಲ್ಲಿ ಯಾವಯಾವ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆಂಬುದನ್ನು ತಾವು ತಿಳಿದುಕೊಳ್ಳುವುದು ಒಳ್ಳೆಯದು ಆ ರೀತಿ ನೋಡಿಕೊಂಡು ನಂತರ ಶಾಶ್ವತವಾಗಿ ಉಳಿಯುವಂತಹ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ ಈ ಕಾರಣದಿಂದ ಈಗ ತೆಗೆದು ಕೊಂಡುಬಂದಿರುವ ತಿದ್ದುಪಡಿ ನುಸೂದೆಯನ್ನು ವಾಪಸ್ ತೆಗೆದುಕೊಂಡು ಸ್ವಲ್ಪ ಕಾಲವಕಾಶ ತೆಗೆದುಕೊಂಡರೂ ಸರಿಯೇ ಎಲ್ಲ ಕಡೆಗಳಿಲ್ಲಿ ನೋಡಿ ನಂತರ ಇದನ್ನು ತೆಗೆದುಕೊಂಡು ಬರುವುದು ಒಳ್ಳೆಯದೆಂದು ಹೇಳುತ್ತೇನೆ. ಈಗ ಜಾರಿಯಲ್ಲಿರತಕ್ಕಂಥಾ ಪದ್ಧತಿಯಿಂದ ಅಂತಹ ಅನಾಹುತ ವೇನೂ ಆಗುತ್ತಿಲ್ಲ ಈ ಹೊಸ ಪದ್ಧತಿಯಿಂದ ಸಾಕಷ್ಟು ಸಮಯ ಉಳಿಯುತ್ತದೆ ಪುಸ್ತಕದಲ್ಲಿ ಬರೆಯುವ ಅವಶ್ಯಕತೆ ಇರುವುದಿಲ್ಲ ರಿಜಿಸ್ಟರು ಅದ ಮೂರನೇ ದಿವಸವೇ ಅನುಮತಿಯನ್ನು ಪಡೆಯಲು ಅವಕಾಶವಾಗುತ್ತದೆಂಬುದನ್ನು ನಾನು ಸಹ ಒಪ್ಪುತ್ತೇನೆ ಅದರೆ ಸಮಯ ಉಳಿಸಲು ಈ ಪದ್ಧತಿಗಿಂತ ಬೇರೆ ದಾರಿ ಹುಡುಕುವುದು ಒಳ್ಳೆಯದೆಂದು ಹೇಳುತ್ತೇನೆ ಪತ್ರ ಬರೆಯತಕ್ಕವರು ಇನ್ನು ಮೇಲೆ ಲೈಸನ್ಸ್ ತೆಗೆದುಕೂಳ್ಳಬೇಕಂದು ಹೇಳುತ್ತಿರುವುದು ಸಾಧುವಾದಕ್ರಮವಲ್ಲನೆಂದು ಹೇಳುತ್ತೆನೆ. ಮಾನ್ಯ ಸಚಿವರು ಇದನ್ನೆಲ್ಲಾ ಪರಿಶೀಲನೆ ಮಾಡಿ ಸ್ವಲ್ಪ ತಡವಾದರೂ ಸರಿಯೇ ಸಧ್ಯಕ್ಕೆ ಈ ಶಾಸನವನ್ನು ಪಾಸ್ ಮಾಡುವುದಕ್ಕೆ ಒತ್ತಾಯ ಮಾಡಬಾರದೆಂದು ಕಳಕಳಿಯಿಂದ ಪ್ರಾರ್ಥನ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಕಂದಾಯ ಸಚಿವರು ಸುಮಾರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರು ಯಾವಾಗಲೂ ಒಳ್ಳೆಯ ಯೋಜನೆಗಳನ್ನೇ ಮಾಡುತ್ತಿರುತ್ತಾರೆ, ಆದರೆ ಈ ಒಂದು ಕೆಟ್ಟ ಯೋಚನೆ ಅವರಿಗೆ ಯಾವಾಗ ಹೊಳೆಯಿತೋ, ಏತಕ್ಕೆ ಹೊಳೆಯಿತೋ ಎಂಬುದು ನನಗೆ ತಿಳಿಯುತ್ತಿಲ್ಲ. ಅವರಿಗೇನಾದರು ದುಸ್ವಪ್ನ ಬಿದ್ದು ಈ ರೀತಿ ಮಾಡುವುದಕ್ಕೆ ಹೊರಟಿದ್ದಾರೆಂದು ಕಾಣುತ್ತಿದೆ. ಇದಕ್ಕಿಂತ ಮುಖ್ಯವಾಗಿ ಮಾಡಬೇಕಾದ ಕಾರ್ಯಗಳು ಬೇಕಾದಷ್ಟು ಇದ್ದವು, ಈಗ ಸಬ್-ರಿಜಿಸ್ಟರ್ ಮತ್ತು ಅವರ ಹತ್ತಿರ ಕೆಲಸ ಮಾಡುವ ಗುಮಾಸ್ತರುಗಳು ಏನಿದ್ದಾರೆ, ಅವರುಗಳನ್ನು ಮೊದಲು ರಿಪೇರಿ ಮಾಡಬೇಕಾಗಿತ್ತು. ಅದು ಬಿಟ್ಟು ಪಾಪ, ಏನೋ ಪತ್ರ ಬರೆದು ಆದರಿಂದ ತಮ್ಮ ಜೀವನ ಮಾಡುತ್ತಿದ್ದ ಬಡಪಾಯಿಗಳ ಹೊಟ್ಟೆ ಮೇಲೆ ಕಲ್ಲು ಹಾಕುವುದಕ್ಕೆ ಹೊರಟಿದ್ದಾರೆ. ನಾನು ಬೇಕಾದರೆ ಭಾಲೆಂಜ್ ಮಾಡಿ ಹೇಳುತ್ತೇನೆ, ಏನೆಂದರೆ ಈಗ ಪತ್ರ ಬರೆಯುವವರು ಏನಿದ್ದಾರೆ, ಅವರು ಬರೆಯುವಂತೆ ದೊಡ್ಡದೊಡ್ಡ ಅಡ್ವೊಕೇಟ್ಸ್ ಕೂಡ ಬರೆಯುವುದಕ್ಕೆ ಆಗುವುದಿಲ್ಲ ಎಂದು; ಕೆಲವರ ಹೆಸರನ್ನು ಬೇಕಾದರೆ ಹೇಳುತ್ತೇನೆ: ಕಾರಕೋಡು ನಾರಾಯಣರಾವ್, ಶ್ರೀ ಎಂ ಎನ್. ಕೃಷ್ಣಮೂರ್ತಿ ಇಂತಹವರು ಪತ್ರಗಳನ್ನು ಬಹಳ ಚೆನ್ನಾಗಿ ಬರೆಯುತ್ತಾರೆ; ಮುಖ್ಯವಾಗಿ ಹಳೆಯ ಶಾನುಭೋಗರು ಚೆನ್ನಾಗಿ ಪತ್ರ ಬರೆಯುತ್ತಾರೆ ಪತ್ರ ಬರೆಯಬೇಕಾದರೂ ಒಂದು ಕ್ರಮ ಅನುಸರಿಸಿ ಬರೆಯಬೇಕಾಗುತ್ತದೆ. ಈಗ ಪತ್ರ ಬರೆಯುವವರು ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಮುಂತಾವ ಗ್ರಂಥಗಳನ್ನು ಓದಿ, ಆದರಲ್ಲಿ ಪದಪುಂಜಗಳ ಜೋಡಣೆ ಯಾವ ರೀತಿ ಇರುತ್ತೆ ದೆಂಬುದನ್ನು ನೋಡಿಕೊಂಡು ಮತ್ತು ತಿಳಿದುಕೊಂಡು, ಅದರ ಒಂದು ಅನುಭವದ ಮೇಲೆ ಬರೆಯುತ್ತಾರೆ. ಈ ರೀತಿ ಅವರು ಪರಂಪರೆಯಿಂದ ಬರೆದುಕೊಂಡು ಬಂದಿದ್ದಾರೆ. ಆ ರೀತಿ ಪತ್ರ ಬರೆದು ಹತ್ತೋ ಇಪ್ಪತ್ತೈದೋ ರೂಪಾಯಿಗಳನ್ನು ಪಡೆದುಕೊಂಡು ಅದರಿಂದಲೇ ಜೀವನ ಮಾಡುತ್ತಿದ್ದಾರೆ. ಅಂತಹವರ ಮೇಲೆ ತಮ್ಮ ಕಣ್ಣು ಬೀಳಲು ಕಾರಣವೇನಿತ್ತು? ಈಗ ಭೂಮಿ ಇಲ್ಲದವರಿಗೆ ಭೂಮಿ ಕೊಟ್ಟು ಭೂಮಾಲೀಕರನ್ನಾಗಿ ಮಾಡಿದಿರಿ; ಅದರಂತೆ ಇಂತಹವರ ಮೇಲೂ ತಮ್ಮ ಒಂದು ಕರುಣೆ ಇರಬೇಕು. ಇನ್ನು ಮುಂದೆ ಪತ್ರ ಬರೆಯುವವರು ಲೈಸನ್ಸ್ ತೆಗೆದುಕೊಳ್ಳಬೇಕೆಂದು ಇಲ್ಲಿ ಹೇಳಿದ್ದೀರಿ; ಅದೇರೀತಿ ಮುಂದೆ ತಾವು ಇಂತಹ ಪೆನ್ನಿನಲ್ಲಿಯೇ ಬರೆಯಬೇಕು, ಇಂತಹ ಮುಳ್ಳಿನಲ್ಲಿಯೇ ಬರೆಯಬೇಕು, ಇಂತಹ ಇಂಕ್‌ನಲ್ಲಿಯೇ ಬರೆಯಬೇಕು ಎಂದು ಹೇಳಬಹುದು; ಇದೆಲ್ಲಾ ಏತಕ್ಕೆ ಬೇಕಾಗಿತ್ತು? ಈಗಿರುವ ಪದ್ಧತಿಯೇ ಚೆನ್ನಾಗಿದೆ; ಅದನ್ನು ಕೆಡಿಸಬೇಡಿ; ಆದಕಾರಣ ಈ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಿ ಎಂದು ನಾನು ಹೇಳುತ್ತೇನೆ; ಪತ್ರ ಬರೆಯುವವರು ಲೈಸನ್, ತೆಗೆದುಕೊಳ್ಳಬೇಕೆಂದರೆ, ಲೈಸೆನ್ಸ್ ಎಲ್ಲಿ ತೆಗೆದುಕೊಳ್ಳಬೇಕು? ಅದನ್ನು ತೆಗೆದುಕೊಳ್ಳಲು ಇನ್ನು ಮುಂದೆ ಕಾಂಗ್ರೇಸ್ ಕಮಿಟಿ ಕಛೇರಿಗೆ ಹೋಗಬೇಕಾಗುತ್ತದೆ; ಲೈಸೆನ್ಸ್ ಬೇಕು ಎಂದು ಹೇಳುವುದಾದರೆ, ನೀವು ನಿಮ್ಮ ಮನೆ ಕ್ರಯ ಮಾಡುವಾಗ ಲೈಸೆನ್ಸ್ ಇದ್ದವರಿಂದಲೇ ಪತ್ರ ಬರೆಸಿದಿರೇನು? ಆದಕಾರಣ ಇದೆಲ್ಲಾ ಬೇಡ ಎಂದು ನಾನು ಹೇಳುತ್ತೇನೆ, ಈಗ ಪತ್ರಗಳನ್ನು ರಿಜಿಸ್ಟರ್ ಮಾಡಿದ ಮೇಲೆ ಅದರ ನಕಲು ಕಾಪಿಯನ್ನು ಪುಸ್ತಕಗಳಲ್ಲಿ ಬರೆಯಲಾಗುತ್ತದೆ; ಈಗ ಅದಕ್ಕೆ ಬದಲು ಬೇರೆ ಪತ್ರಗಳಲ್ಲಿ ಬರೆದು ಅಂಟಿಸಲಾಗುತ್ತದೆಂದು ಹೇಳುತ್ತಾರೆ ಆದರೆ ಯಾರಾದರೂ ಆ ರೀತಿ ಅಂಟಿಸಿದ ಪೇಜುಗಳನ್ನೇ ಹರಿದುಕೊಂಡು ಹೋದರೆ ಏನು ಮಾಡುವುದು? ಮಾನ್ಯ ಕಾಗೋಡು ತಿಮ್ಮಪ್ಪನವರು ಇಂಕನ್ನು ಯಾರ ಹತ್ತಿರ ತಯಾರು ಮಾಡುತ್ತೀರಿ ಎಂದು ಕೇಳಿದರು; ಅದರಂತೆ ಪತ್ರ ಬರೆಯಲು ಬೇಕಾದ ಕಾಗದವನ್ನು ಒದಗಿಸಲು, ಯಾವ ಕಂಪನಿ ಹತ್ತಿರ ಮಾತನಾಡಿದ್ದೀರಿ? ಇದು ಸರಿಯಲ್ಲ; ಈಗಿನ ಒಂದು ಪದ್ಧತಿಗೆ ಅಡ್ಡಿ ಆತಂಕ ತರುವುದು ಬೇಡ, ಇದು ಯಾರಿಗೂ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ. ಆ ರೀತಿ ಓದಲಾವಣೆ ಮಾಡುವುದು ಅವಶ್ಯಕ ಕಂಡುಬಂದರೆ ನಾವೇ ಮಾಡಿ ಎಂದು ಹೇಳುತ್ತೇವೆ; ಆದಕಾರಣ ಈಗ ತಂದಿರುವ ತಿದ್ದುಪಡಿಯನ್ನು ವಾಪಸ್ ತೆಗೆದುಕೊಂಡು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈಗ ಪತ್ರ ಬರೆಯುವವರು ಬಹಳ ಅನುಭವ ಹೊಂದಿದ್ದಾರೆ; ಸುಂದರವಾದ ಪದಗಳನ್ನು ಉಪಯೋಗಿಸಿ ಬರೆಯುತ್ತಿದ್ದಾರೆ ಹೊಸ ಮೈಸೂರು ಭಾಗದಲ್ಲಿ ಯಾವ ಪದ್ಧತಿ ಇದೆಯೋ ಗೊತ್ತಿಲ್ಲ, ಆದರೆ ಹಳೆಯ ಮೈಸೂರು ಭಾಗದಲ್ಲಿ ಪತ್ರ ಬರೆಯುವವರು ಮೋತಿ ಅಕ್ಷರದಲ್ಲಿ ಬರೆಯುತ್ತಾರೆ; ಏಕೆಂದರೆ ಪತ್ರ ತಿದ್ದುವುದಕ್ಕೆ ಅವಕಾಶವಿರಬಾರದೆಂಬ ಕಾರಣದಿಂದ ಹಿಂದಿನವರು ಒಳ್ಳೆಯ ನಿಪುಣರು; ಅನೇಕ ಗ್ರಂಥಗಳನ್ನು ಓದಿ ಅರ್ಥಮಾಡಿಕೊಂಡು, ಪತ್ರಗಳನ್ನು ಬರೆಯುವಾಗ ಒಳ್ಳೆಯ ಪದಪುಂಜಗಳನ್ನು ಉಪಯೋಗಿಸುತ್ತಾರೆ. ಇಂತಹವರ ಸಹಾಯವನ್ನು ಪಡೆಯುವುದಕ್ಕೆ ಬದಲು ಸರ್ಕಾರದವರು ಮೂಲ ವ್ಯಾಸರ ಹತ್ತಿರ ಹೋಗುತ್ತಿದ್ದಾರೆ; ಕನ್ನಡ ಭಾಷೆಯಲ್ಲಿ ಪತ್ರ ಬರೆಯಲು ಅವಕಾಶ ಕೊಡಿ ಎಂದರೆ, ಇವರು ಸಂಸ್ಕೃತ ಭಾಷೆಯೇ ಸರಿ ಎಂದು ಹೇಳಿವ್ದಾರೆ.

ಈಗ ನಮ್ಮ ಕನ್ನಡ ಭಾಷೆಯನ್ನು ಮುಂದಕ್ಕೆ ತರುತ್ತಿದ್ದಾರೆ ಅದು ಎಲ್ಲಿಯವರೆಗೆ ಬಂದಿದೆ ಎಂದರೆ ಆದಕ್ಕೆ ಮತ್ತೊಮ್ಮೆ ಅನುವಾದ ಮಾಡುವ ಮಟ್ಟಕ್ಕೆ ಬಂದಿದೆ. ಉದಾಹರಣೆಗೆ ಹೇಳುವುದಾದರೆ ವಿಧಾನಸೌದದಲ್ಲಿ ಕೆಲವು ಅಧಿಕಾರಿಗಳ ಕೊಠಡಿಗಳ ಮುಂದೆ ಬೋರ್ಡನ್ನು ಓದಬೇಕಾದರೆ ''ವಾದೇಶಕ,, ಎಂದು ಇದೆ ಇದಕ್ಕೆ ಬದಲಾಗಿ ಇಂಗ್ಲೀಷ್ ಪದಗಳನ್ನೇ ಉಪಯೋಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ. ಉದಾಹರಣೆಗೆ ಕಾರ್ಯದರ್ಶಿ ಅಥವಾ ಸೆಕ್ರೆಟರಿ ಎಂದು ಉಪಯೋಗಿಸಿದರೆ ಏನು ತಪ್ಪು ಇದೆ.? ನಾವೆಲ್ಲರೂ ನೆಲದಿತಂದ ಬಂದಂತ ಜನರು ನೆಲದಮೇಲೆ ನಿಲ್ಲುವಂತ ಜನ. ಈಗ ಏನು ಬಳಸುತ್ತಿದ್ದಾರೆ ಅದಕ್ಕೆ ಟ್ರೈನಿಂಗ್ ಬೇಕಾಗುತ್ತದೆ. ಆದಕ್ಕೆ ಎಲ್ಲಿ ಟ್ರೈನಿಂಗ್ ಕೊಡುತ್ತಿರಾ ಸ್ವಾಮಿ ನಮ್ಮ ಹಳ್ಳಿ ಶಾನುಭೋಗರು ದ್ರಾವಿಡ ಪ್ರಣಾಯಾಮ ಮಾಡಿದಂತೆ ಮಾಡುವುದಕ್ಕೆ ಹೋಗಬೇಡಿ. ಇನ್ನು ಒಂದು ಲೈಸೆನ್ಸ್ ಉಳಿದಿದೆ ಮಾನ್ಯ ಕಾದಾಯ ಸಚಿವರು ಹುಲಿಯೂರು ದುರ್ಗದಲ್ಲಿ ಒಂದು ಕಾಲೇಜು ಮಾಡಿ ಅವರೇ ಅದಕ್ಕೆ ಪ್ರಿನ್ಸಿಪಾಲ್ ಆದರೆ ಒಳ್ಳೆಯದು ತಾವು ಎಲ್ಲಾ ರೀತಿ ತಿಳಿದುಕೊಂಡಿರತಕ್ಕಂಥವರು ಹಳೇ ಶಾನುಭೋಗರಿದ್ದ ಹಾಗೆ. ಲೈಸೆನ್ಸ್ ವಕೀಲರಿಗೆ ಕೊಟ್ಟರೆ ಹೇಗೆ ನಮ್ಮ ಊರಿನಲ್ಲಿ ಪತ್ರ ಬರೆಸುವುದಕ್ಕೆ ಬೇಕು ಎಂದರೆ ನಾವು ಶಿವಮೊಗ್ಗಾಕ್ಕೆ ಬರಬೇಕು. ಮತ್ತೆ ಯಾತಾಪ್ರಕಾರ ನಾನು ಕೂತ ಲಾಯರ್ ಆದಕ್ಕೆ ಹೇಳುತ್ತೇನೆ. ಮತ್ತೆ ಜನರನ್ನು ಕೆಲವರ ಹಿಡಿತಕ್ಕೆ ಸಿಕ್ಕಿಸಿ ಒದ್ದಾಡಿಸುವುದು ಬೇಡ. ಲಾಯರ್‌ಗಳಿಗೆ ಎಷ್ಟೋ ಜನರಿಗೆ ಪತ್ರ ಬರೆಸುವುದಕ್ಕೆ ಬರುವುದಿಲ್ಲ ಇನ್ನು ವಿಲೇಜ್ ಆಕೌಂಟೆಂಟ್ ಯಾರು ಇದ್ದಾರೆ ಅವರು ಪಹಣಿ ಬರೆಯುವುದು ಎಂಬುದಕ್ಕೆ ಪೇಣಿ ಎಂದು ಬರೆಯುವಂತವರು ಇದ್ದಾರೆ ಒಂದು ಸಾರಿ ನಮ್ಮ ಒಬ್ಬ ಅಧಿಕಾರಿಗೆ ನಿಮ್ಮ ಖಾತೆಯ ಮಂತ್ರಿಗಳು ರೆವಿನ್ಯೂ ಮಂತ್ರಿಗಳು ಅವರ ಹೆಸರನ್ನು ಬರೆ ಎಂದು ಹೇಳಿದಕ್ಕೆ ಅವನು ಏನು ಬರೆದ ಗೊತ್ತೆ ಅದನ್ನು ಈಗ ಇಲ್ಲಿ ಹೇಳುವುದು ಬೇಡ. ನಾನು ತಮ್ಮನ್ನು ವಿನಯಪೂರ್ವಕವಾಗಿ ಕೇಳುತ್ತೇನೆ ಇದನ್ನು ವಾಪಸ್ ತೆಗೆದುಕೊಳ್ಳಿ ಎಂದು.

†ಶ್ರೀ ಎನ್ ಹುಚ್ಚಮಾಸ್ತಿಗೌಡ — ಮಾನ್ಯ ಅಧ್ಯಕ್ಷರೇ, ಮಾನ್ಯ ತಿಮ್ಮಪ್ಪನವರು ಹಾಗೂ ಮಾನ್ಯ ಲಿಂಗಪ್ಪನವರು ಇಂತಹ ಬಹಳ ಉಪಯುಕ್ತವಾದ ಮತ್ತು ಹೊಸ ಪದ್ಧತಿಗಳಿಗೆ ಬೆಂಬಲ ಕೊಡುತ್ತಾರೆ ದು ತಿಳಿದಿದ್ದೆ. ಏತಕ್ಕೆ ಈ ರೀತಿ ಪ್ರತಿಗಾಮಿಗಳ ಮನೋಭಾವನೆಯನ್ನು ತಾಳುತ್ತಾ ಇದ್ದಾರಲ್ಲ ಎಂದು ನನಗೆ ವ್ಯಸನವಾಗಿದೆ ಇದಕ್ಕೆ ಮೂಲ ಕಾರಣ ಎಲ್ಲದರಲ್ಲೂ ದೋಷಗಳು ಇಲ್ಲವೆಂದು ಅಲ್ಲ. ಅಸಲು ಪತ್ರ ಬರೆದುಕೊಂಡು ಹೋಗಿ ಸಬ್ ರಿಜಿಸ್ಟ್ರಾರ್‌ಗೆ ಕೊಡುತ್ತಾರೆ ಅದನ್ನು ರಿಜಿಸ್ಟ್ರಾರ್ ರವರು ರಿಜಿಸ್ಟ್ರ್ ಮಾಡುತ್ತಾರೆ. ಅದರ ನಕಲನ್ನು ಪಾರ್ಟಿ ನೋಡುವುದಿಲ್ಲ ಮೂಲ ಪತ್ರ ಯಾವಾಗಲಾದರೂ ಇಲ್ಲದೆ ಇದ್ದ ಸಂದರ್ಭದಲ್ಲಿ ಅದರ ನಕಲನ್ನು ತೆಗೆದುಕೊಳ್ಳಲು ಹೋದಾಗ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಒಬ್ಬ ಗುಮಾಸ್ತನನ್ನು ಕೈಗೆ ಹಾಕಿಕೊಂಡರೆ ಸಾಕು ಏನು ಬೇಕಾದರೂ ಮಾಡಲು ಸಾಧ್ಯ. ಆದ್ದರಿಂದ ಈಗ ಇರುವ ಪದ್ಧತಿಯನ್ನು ಬದಲಾಯಿಸಿ ಬೇರೆ ಈಗ ನಾವು ಏನು ಬದಲಾವಣೆ ತಂದಿದ್ದೇವೆ ಅದನ್ನು ಮಾಡಿದರೆ ಮುಂದೆ ಯಾವ ತಪ್ಪು ನೆಡೆಯುವುದಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ ಆದರೆ ನಾವು ಯಾವಾಗಲೂ ಹಳೆಯ ಪದ್ಧತಿಯನ್ನೇ ಹಿಡಿದುಕೊಂಡು ಹೋಗುವುದಕ್ಕಿಂತ ಹೊಸದಾಗಿ ಸ್ವಲ್ಪ ಮಾರ್ಪಾಡುಗಳನ್ನು ಮಾಡಿ ಅದರ ಅನುಕೂಲವನ್ನು ನೋಡಬೇಕು ಅನೇಕ ವರ್ಷಗಳಿಂದ ಅದು ಜಾರಿಗೆ ಬಂದಿರಬಹುದು. ಆದರೆ ನಾವು ಏನು ಒಂದು ಹೊಸ ಪದ್ಧತಿಯನ್ನು ತಂದಿದ್ದೇವೆ ಅದು ಮದ್ರಾಸಿನಲ್ಲಿ ೮-೯ ವರ್ಷಗಳಿಂದ ಅನುಭವಕ್ಕೆ ಬಂದಿದೆ. ಈಗ ಈ ಪದ್ಧತಿಯಲ್ಲಿ ಪಾರ್ಟಿ ಪತ್ರದ ನಕಲನ್ನು ತಾನೂ ನೋಡಿ ರುಜು ಮಾಡಿರುತ್ತಾನೆ. ಒಂದು ಪಕ್ಷ ಅದನ್ನು ಅಳಿಸಿದರೆ ಮೂಲ ಪತ್ರವು ರಿಜಿಸ್ಟ್ರರ್ ಆಗಿರುವುದು ಇರುತ್ತದೆ. ಅದನ್ನು ಕಂಡುಹಿಡಿಯುವುದಕ್ಕೆ ಸಾಧ್ಯ. ಈ ಬದಲಾವಣೆಯಿಂದ ಏನೂ ಅಪಾಯ ಜಾಸ್ತಿ ಎಂದು ಊಹೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಲಿಂಗಪ್ಪನವರು ಇನ್ನು ಏನೋನೋ ವ್ಯಾಖ್ಯಾನ ಮಾಡಿದರು ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಲೈಸೆನ್ಸ್ ಹೊಸದಾಗಿ ತೆಗೆದುಕೊಳ್ಳಬೇಕಾದರೆ ಶಿಕ್ಷಣ ತರಬೇತಿ ಕಾಲೇಜು ಓಪನ್ ಮಾಡಿ ನೀವು ಅದಕ್ಕೆ ಪ್ರಿನ್ಸಿಪಾಲರಾಗಿ ಎಂದು ಬಹಳ ಧಾರಾಳವಾಗಿ ಪದಗಳನ್ನು ಉಪಯೋಗಿಸಿದರು, ನಮ್ಮ ಮೂಲ ಉದ್ದೇಶದ ಬಗ್ಗೆ ಅವರು ಅಷ್ಟು ಟೀಕೆ ಮಾಡಿಲ್ಲ. ಯಾರಾದರೂ ಅನುಭವ ಇರತಕ್ಕಂಥವರು ಪತ್ರ ಬರೆಯುವುದಕ್ಕೆ ಲೈಸೆನ್ಸ್ ಪಡೆಯಬಹುದು ನಿಪುಣರಾಗಿರತಕ್ಕಂಥವರು ಪಡೆಯಬಹುದು. ಏಕೆಂದರೆ ಸಬ್ ರಿಜಿಸ್ಟ್ರರ್ ಆಫೀಸ್‌ಗಳಿಗೆ ಹಠಾತ್ ಆಗಿ ಹೋಗಿ ನೋಡಿದಾಗ ಲಂಚ ಇದ್ದುದ್ದಲ್ಲಿ ಆಫೀಸಿನಿಂದ ಹೋಗಿ ಜವಾನನ್ನು, ಗುಮಾಸ್ತನನ್ನು ಅಥವಾ ಸಬ್ ರಿಜಿಸ್ಟ್ರಾರ್‌ನ್ನು ಪರೀಕ್ಷೆ ಮಾಡಿದರೆ ಅದು ಅಲ್ಲಿ ಇಲ್ಲ, ಅದು ಬೇರೆ ಕಡೆಗೆ ವರ್ಗವಾಗಿ ಹೋಗಿದೆ. ಅದು ಎಲ್ಲಿಗೆ ಹೋಗಿದೆ ಎಂದರೆ ಪತ್ರ ಮಾರುವವರು, ಪತ್ರ ಬರೆಯುವವರು ಏನು ಇದ್ದಾರೆ ಅಲ್ಲಿಗೆ ಈ ಪದ್ಧತಿ

ಹೋಗಿದೆ. ಜನರು ತಮ್ಮ ಪತ್ರಗಳನ್ನು ರಿಜಿಸ್ಟರ್ ಮಾಡಿಸಿಕೊಂಡು ಹೋದಮೇಲೆ ಆಫೀಸಿನ ಕೆಲಸವಲ್ಲಾ ಮುಗಿದಮೇಲೆ ಪತ್ರ ಬರೆಯತಕ್ಕಂಥವರು ದಿನವೆಲ್ಲಾ ನಡೆದ ವ್ಯವಹಾರದ ವೃತ್ತಾ ಎಲ್ಲರೂ ಹೋದಮೇಲೆ ಹುಚ್ಚಿಕೆಯಾಗುತ್ತದೆ ಆದ್ದರಿಂದ ಈ ಪತ್ರ ಬರೆಯುವವರನ್ನು ಮತ್ತು ಪತ್ರ ಮಾಡುವವರನ್ನು ಹಿಡಿತದಲ್ಲಿಟ್ಟುಕೊಂಡು ಇರಬೇಕು. ಆದುದರಿಂದ ಲೈಸೆನ್ಸ್ ತೆಗೆದುಕೊಂಡರೆ ಒಂದು ಹಿಡಿತದಲ್ಲಿರುತ್ತದೆ. ಅವನು ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿದೆ. ಇನ್ನು ಅನೇಕ ದೋಷಗಳನ್ನು ಹೇಳಿದ್ದಾರೆ ಮತ್ತು ಕಾಗದ ಸಪ್ಲೈ ಮಾಡುವುದಕ್ಕೆ ಸಾಧ್ಯವೇ ಎಂದರು, ಈಗ ಆದು ನಾಸಿಕ್ ಮುದ್ರಣಾಲಯದಲ್ಲಿ ತಯಾರಾಗಿ ಬರುವುದು ಸ್ವಲ್ಪ ಕಷ್ಟವಾಗಿತ್ತು. ಆದರೆ ಆಗ ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತಾ ಇದೆ. ಈ ತೊಂದರೆ ಹೋಗಬೇಕಾದರೆ ನಮ್ಮ ಕಾಗದ ಕಾರ್ಖಾನೆಗಳಲ್ಲಿ ತಯಾರು ಮಾಡತಕ್ಕಂಥ ಕಾಗದವು ಉಪಯೋಗಕ್ಕೆ ಬರುತ್ತದೆ. ಈ ಒಂದು ವಿಶೇಷವಾದ ರೀತಿಯಲ್ಲಿ ಮತ್ತು ಹೆಚ್ಚು ದಿವಸ ಬಾಳಿಕೆ ಬರುಂ ವಂತಹ ವ್ಯವಸ್ಥೆ ಮಾಡುಬಹುದು. ಇನ್ನು ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಅಷ್ಟೊಂದು ಮಹತ್ವ ಇಲ್ಲವೆಂದು ಭಾವಿಸುತ್ತೇನೆ.

3-00 P M

ಮತ್ತೆ ಇದರಲ್ಲಿ ಇನ್ನೊಂದು ಅಂಶವನ್ನು ಈಗಾಗಲೇ ಹೇಳಿದೆ. ಅದರ ಮೇಲೆ ಯಾರೂ ಹೆಚ್ಚಿಗೆ ಹೇಳಲಿಲ್ಲ. ಸೆಕ್ಷನ್ ೫೨ (ಎ) ಬಗ್ಗೆ ಮಾನ್ಯ ಶ್ರೀ ಕಕ್ಕಿಲಾಯ ಅವರು ಮಾತನಾಡುತ್ತಾ ಆದನ್ನು ಇನ್ನೂ ಮುಂಚಿತವಾಗಿ ಈ ಮಸೂದೆಯಲ್ಲಿ ಸೇರಿಸಿದ್ದರೆ ಬಹಳ ಅನುಕೂವಾಗುತ್ತಿತ್ತೆಂದು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಉದಾಹರಣೆಗೆ ಹೇಳುವುದಾದರೆ, ಹರಿಜನಗಿರಿಜನರಿಗೆ ಜಮೀನು ಮಂಜೂರು ಮಾಡುವಾಗ, ಪೊಲಿಟಿಕಲ್ ಸಫರರ್ಸ್‌ಗೆ ಜಮೀನು ಕೊಡುವಾಗ ಕೆಲವು ಷರತ್ತುಗಳನ್ನು ಹಾಕಿ ಆದನ್ನು ಮಾರಾಟ ಮಾಡಬಾರದು ಭೂಸುಧಾರಣೆಗೆ ಸಂಬಂಧಪಟ್ಟ ಕಾಯಿದೆಯನ್ನು ಮಾಡುವಾಗ ಅಂತಹ ಪತ್ರಗಳನ್ನು ರಿಜಿಸ್ಟರ್ ಮಾಡಬಾರದು ಎಂಬುದಾಗಿ ನೋಟಿಫಿಕೇಷನ್ ಮಾಡಿ ಸಬ್ ರಿಜಿಸ್ಟ್ರಾರ್ ಅವರಿಗೆ ತಿಳಿಸಿದರ ಕಾರಣ ಆ ಪತ್ರಗಳು ರಿಜಿಸ್ಟರ್ ಆಗುತ್ತಾ ಇರಲಿಲ್ಲ ಈಗಾಗಲೇ ಎಷ್ಟೋ ರಿಜಿಸ್ಟರ್ ಆಗಿವೆ. ಅಲವು ಅನೇಕ ವರ್ಷಗಣ ಹಿಂದೆ ರಿಜಿಸ್ಟರ್ ಆಗಿರುವುದರಿಂದ ಮೊದಲಿನಿಂದ ಸ್ವಲ್ಪ ಅವುಗಳ ಬಗ್ಗೆ ಅನಾಹುತಗಳು ಆಗುತ್ತಿತ್ತು ಆದನ್ನು ಮೊದಲೇ ತಪ್ಪಿಸಬಹುದಾಗಿತ್ತು ಎಂಬುದಾಗಿ ಕೆಲವರು ಹೇಳಿದರು. ಆದನ್ನು ನಾನು ಒಪ್ಪುತ್ತೇನೆ. ಆದನ್ನು ಹಿಂದೆ ಯಾರೂ ಯೋಚನೆ ಮಾಡದೇ ಇರಬಹುದು. ಈಗಲಾದರೂ ಅದನ್ನು ಯೋಚನೆ ಮಾಡಿದೆ ತಂದಿರುವುದರಿಂದ ಅದಕ್ಕೆ ಈ ಸಭೆ ಮನ್ನಣೆ ಕೊಡಬೇಂದು ನನ್ನ ಪಾರ್ಥನೆ. ಇಷ್ಟೇ ಅಲ್ಲದ ನಕಲುಗಳನ್ನು ಯಾವ ಕೊಟ್ಟಾಗ ಆರ್ಡರ್‌ನಲ್ಲಿ ಯಾವ ದಿವಸ ಒಂದಾದಮೇಲೊಂದು ಬಂದಿರುತ್ತದೋ ಅದೇ ರೀತಿಯಲ್ಲಿ ಆಫೀಸ್ ರಿಜಿಸ್ಟರ್‌ನಲ್ಲಿ ಅಥವಾ ಪುಸ್ತಕದಲ್ಲಿ ಸೆಕ್ಷನ್ ೫೨(ಸಿ) ಪ್ರಕಾರ ಪೇಸ್ಟ್ ಮಾಡಬೇಕೆಂದಿದೆ ಆದ್ದರಿಂದ ಈ ವಿಚಾರಗಳ ಕಡೆಗೆ ಸಾಕಾದಷ್ಟು ಎಚ್ಚರಿಕೆ ತೆಗೆದುಕೊಂಡು ಈ ಮಸೂದೆಯನ್ನು ತಂದಿದ್ದೇವೆ ಇದರಲ್ಲಿ ಯಾವ ಒಂದು ಅಪಾಯವೂ ಇಲ್ಲ. ಇನ್ನೊಂದು ಸಲಹೆ ಮಾಡಿದರು. ಬೊಂಬಾಯಿನಲ್ಲಿ ಇದರ ಬಗ್ಗೆ ಮೈಕ್ರೊಫಿಲಂ ಮಾಡತಕ್ಕ ಪದ್ಧತಿ ಇದೆ, ಇದನ್ನು ಮಾಡಬಹುದೆಂದು ಕೆಲವರು ಹೇಳಿದರು. ಐ ಜಿ ಆರ್ ಅವರನ್ನು ಹಿಂದೆಯೇ ಅಲ್ಲಿಗೆ ಕಳಹಿಸಿದ್ದಾರೆ. ಅದಕ್ಕೆ ಬೇಕಾದ ಯಂತ್ರೋಪಕರಣಗಳನ್ನು ಒದಗಿಸಿಕೊಂಡು ಈ ಕೆಲಸಮಾಡ ಬೇಕಾಗಿದೆ. ಈಗ ಪ್ರಪಂಚದಲ್ಲಿ ಪ್ರಯೋಂದೂ ಪ್ರಗತಿ ಪಥದಲ್ಲಿ ಓಡುತ್ತಿರುವಾಗ ನಾವು ಹಿಂದಿನ ಎಲ್ಲ ಪದ್ಧತಿಯೂ ನಿಶ್ಚಯವಾಗಿ ದೋಷರಹಿತವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ಒಂದು ಹೊಸದಾದ ಪದ್ಧತಿಯನ್ನು ಅನುಸರಿಸುವುದಕ್ಕೆ ಏನೂ ಅಡ್ಡಿ ಇಲ್ಲ ಇದು ದೋಷರಹಿತವಾಗಿದೆಯೆಂದು ಹೇಳಿದಿದ್ದರೂ ಹಿಂದಿನದು ಎಷ್ಟರಮಟ್ಟಿಗೆ ದೋಷರಹಿತವಾಗಿತ್ತೆಂದು ಹೇಳಬಹುದು ಆದರೆ ಈಗಿನ ಒಂದು ಹೊಸ ಪದ್ಧತಿಯಲ್ಲಿ ಸ್ವಲ್ಪಮಟ್ಟಿಗೆ ಹಣ ಉಳಿತಾಯವಾಗುತ್ತದೆ. ಸಿಬ್ಬಂದಿ ಖರ್ಚು ಉಳಿತಾಯವಾಗುತ್ತದೆ, ಕಾಲ ವಿತರಣೆ ಮಾಡುವುದೂ ಸಹ ಕ್ಷಿಪ್ರವಾಗುತ್ತದೆಂದು ತಿಳಿದು ಈ ಮಸೂದೆಯನ್ನು ಒಂದು ಹೆಚ್ಚಿನ ಅನುಭವದಿಂದ ತಂದಿರುವುದರಿಂದ ಈ ಮಸೂದೆಗೆ ಎಲ್ಲರೂ ಹೆಚ್ಚು ಬೆಂಬಲ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಟಿ. ಕೃಷ್ಣಪ್ಪ — ಎಲ್ಲರಿಗೂ ಲೈಸೆನ್ಸ್ ಕೊಡುವ ಬಗ್ಗೆ ಒಂದು ವಿಶಿಷ್ಟ ರಕ್ಷಣೆ ಏನಾದರೂ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ: —ಸೆಕ್ಷನ್ ೮೦(ಎ) ಪ್ರಕಾರ ಯಾವ ರೀತಿಯಾದ ನೀತಿ ನಿಯಮ ಗಳಿವೆಯೋ ಅವನ್ನು ಸಾಕಾದಷ್ಟು ಎಚ್ಚರಿಕೆಯಿಂದ ನೋಡಿ ಮಾಡಲಾಗಿದೆಯೆಂದು ನಾನು ಈ ಸಭೆಗೆ ಭರವಸೆ ಕೊಡಂತ್ತೇನೆ.

MADAM SPEAKER.—The question is :

"That the Registration (Karnataka Amendment) Bill, 1976, as passed by the Legislative Council be taken into consideration."

The motion was aodpted.

CLAUSE 2 TO 19

MADAM SPEAKER.—The question is:

"That clauses 2 to 19, both inclusive and the Schedule do stand part of the Bill."

The motion was adopted

Clauses 2 to 19 both inclusive, were added to the Bill

CLAUSES 1 ETC

MADAM SPEAKER.—The question is:

"That Clause I, the long Title, the Preamble and the Enacting formula do stand part of the Bill."

The motion was adopted.

Clause 1, the long title, the preamble and the Enacting formula were added to the Bill.

Motion to pass.

SRI N HUTCHMASTHY GOWDA.—(Minister for Revenue.) I beg to move.—

"The the Registration (Karnataka Amendment) Bill, 1976, as passed by the Legislative Council, be passed,"

MADAM SPEAKER.—The question is:

"That the Registration (Karnataka Amendment) Bill, 1976, as passed by the Legislative Council, be passed."

The motion was adopted and the Bill was passed.